ಶ್ರೀಮತಿ. ಬಿ.ಟಿ. ಲಲಿತಾ ನಾಯಕ್: ಅಧ್ಯಕ್ಷರೆ, ಸದಸ್ಯರಿಗೆ ದಿವಸಕ್ಕೆ ಎರಡು ಸಾರಿ ಹಾಜರಾತಿಯನ್ನು ತೆಗೆದುಕೊಳ್ಳಿ.

ಶ್ರೀ. ಹೆಚ್.ಕೆ. ಕುಮಾರಸ್ವಾಮಿ: ಅಧ್ಯಕ್ಷರೇ, ಹಾಜರಾತಿಯನ್ನು ತಾವೇ ತೆಗೆದುಕೊಳ್ಳುವುದು ಒಳ್ಳೆಯದು.

ಶ್ರೀ.ಎಂ. ಮಲ್ಲಿಕಾರ್ಜುನ ಖರ್ಗೆ: ಸನ್ಮಾನ್ಯ ಅಧ್ಯಕ್ಷರೆ, ನನ್ನ ಒಂದು ಸಲಹೆ ಅದು ಸರಿಯೋ ತಪ್ಪೋ ಗೊತ್ತಾಗುವುದಿಲ್ಲ, ತಾವು ಹಾಜರಾತಿಯನ್ನು ಬೆಳಗ್ಗೆ ಸಂಜೆ ಎರಡು ಸಾರಿ ಮಾಡಿ.

ಶ್ರೀ.ಜಿ.ವಿ. ಶ್ರೀರಾಮರೆಡ್ಡಿ: ಸಹಿ ಮಾಡುವುದರಿಂದ ಇದು ಪರಿಹಾರವಾಗುವುದಿಲ್ಲ. ಅಧ್ಯಕ್ಷರು ಬೇಕಾದರೆ ಹಾಜರಾತಿ ಪುಸ್ತಕವನ್ನು ತರಿಸಿನೋಡಿದರೆ ಸಾಕಷ್ಟು ಸಹಿಗಳು ಇರುವುದು ಗೊತ್ತಾಗುತ್ತದೆ.

ಶ್ರೀ. ವಾಟಾಳ್ ನಾಗರಾಜ್: ಸಹಿ, ನೀತಿ, ಕಾನೂನಿನ ಬಲ ಬೇಡಿ, ತಾವು ಹೇಳಿದಂತೆ ನಾನು ನಿಮ್ಮನ್ನು ಸಮರ್ಥನೆ ಮಾಡುತ್ತೇನೆ. ಯಾವುದೋ ಪೂರ್ವಜನ್ಮದ ಪುಣ್ಯದಿಂದ ನಾವು ಇಲ್ಲಿಗೆ ಬಂದಿದ್ದೇವೆ ಈ ಸದನಕ್ಕೆ ನಾವು ಸದಸ್ಯರಾಗುವುದೇ ನಿಜವಾಗಲೂ ನಮಗೆ ಬಹಳ ಪಾವಿತ್ರತೆ, ಗೌರವ ತರತಕ್ಕಂಥದ್ದು, ಅದನ್ನು ನಾವು ಕಳೆದುಕೊಳ್ಳುತ್ತಿದ್ದೇವೆಂದು ನನಗೆ ಬಹಳ ನೋವಾಗುತ್ತಿದೆ. ಸದನ ಸಂಜೆ ಎಷ್ಟು ಹೊತ್ತಿನವರೆಗೆ ನಡೆಯುತ್ತದೆ ಆಲ್ಲಿಯವರೆವಿಗೂ ಸದನದ ತುಂಬಾ ಜನ ಕುಳಿತು, ಎಂತೆಂಥ ದೊಡ್ಡ ದೊಡ್ಡ ಮಹನೀಯರು ಈ ಸದನದಲ್ಲಿ ಕುಳಿತು ಚರ್ಚೆ ಮಾಡಿದ್ದಾರೆ ಅವನೆಲ್ಲಾ ನಾವು ಕೇಳಿದ್ದೇವೆ ಇವತ್ತಿನ ಪರಿಸ್ಥಿತಿಯನ್ನು ನೋಡಿದರೆ, ಯುದ್ಧವೆಲ್ಲಾ ಮುಗಿದು ಸೋತು ಸುಣ್ಣವಾಗಿ ಎಲ್ಲೋ ಹೋಗಿದ್ದೇವೆ ಎನ್ನುವ ರೀತಿ ಗಾಢಾಂಧಕಾರದ ಪರಿಸ್ಥಿತಿ ನಿರ್ಮಾಣವಾಗಿದೆ; ಆ ಮೋಡ ಕವಿದ ವಾತಾವರಣ ನಿರ್ಮಾಣವಾಗಿದೆ, ಅದಾ ಗಬಾರದಿತ್ತು.

ಶ್ರೀ. ಸಿದ್ಧರಾಮಯ್ಯ (ಉಪಮುಖ್ಯಮಂತ್ರಿಗಳು): ನಿನ್ನೆ ನನ್ನ ಭಾಷಣವನ್ನು ಕೇಳಲಿಲ್ಲ. ನೀವು ಆಲ್ಲಿ ಕುಳಿತುಕೊಂಡು ಪ್ರತಿ ಭಾಷಣ ಮಾಡುವುದಕ್ಕೆ ಪ್ರಾರಂಭ ಮಾಡಿಬಿಟ್ಟಿರಿ.

ಶ್ರೀ. ವಾಟಾಳ್‌ನಾಗರಾಜ್: ನಿನ್ನೆ ತಾವು ಭಾಷಣ ಮಾಡುವಾಗ ಇದ್ದಷ್ಟು ಜನ ಈಗ ಇಲ್ಲಿ ಇದ್ದಾರೆಯೇ? ನಾನು ಪ್ರತಿ ಭಾಷಣ ಮಾಡಲಿಲ್ಲ, ನಾನು ಇಲ್ಲಿ ಕುಳಿತುಕೊಂಡು, ನಿಮ್ಮ ಭಾಷಣ ಪ್ರತಿಯೊಂದು ಪದವನ್ನು ನಾನು ನೋಡುತ್ತದ್ದೆ. ನನಗೆ ನಿಮ್ಮ ಬಗ್ಗೆ ವಿರೋಧವಿಲ್ಲವೆಂದು ನಾನು ಸ್ಪಷ್ಟವಾಗಿ ಹೇಳಿಬಿಟ್ಟೆ ಹೋಗಿದ್ದೇನೆ. ಆ ಕ್ಯಾಮರಗಳು, ಗದ್ದಲದಲ್ಲಿ ಕೇಳಲಿಲ್ಲ.

ಶ್ರೀ. ಸಿದ್ದರಾಮಯ್ಯ: ಇನ್ನು ಮುಂದೆ ಕ್ಯಾಮರವನ್ನು ನಿಮ್ಮ ಮುಂದೆಯೇ ಇರಿಸಬೇಕೆಂದು ತೀರ್ಮಾನ ಮಾಡಿದ್ದೇವೆ.

5 ವಿತ್ತೀಯ ಕಾರ್ಯಕಲಾಪಗಳು, 1998-99ನೇ ಸಾಲಿನ ಆಯವ್ಯಯದ ಮೇಲಿನ ಚರ್ಚೆ.

5. ವಿತ್ತೀಯ ಕಾರ್ಯಕಲಾಪಗಳು: 1998-99ನೇ ಸಾಲಿನ ಆಯವ್ಯಯದ ಮೇಲಿನ ಚರ್ಚೆ.

* ಶ್ರೀ. ಎಂ. ಮಲ್ಲಿಕಾರ್ಜುನ ಖರ್ಗೆ(ವಿರೋಧಪಕ್ಷದ ನಾಯಕರು):- ಅಧ್ಯಕ್ಷರೆ, ಅರ್ಥಸಚಿವರಾದ ಶ್ರೀಮಾನ್ ಸಿದ್ಧರಾಮಯ್ಯನವರು ಮಂಡಿಸಿರುವ 1998-99ನೇ ಸಾಲಿನ ಆಯವ್ಯಯವನ್ನು ವಿರೋಧಿಸುತ್ತಾ ಕೆಲವು ಸಲಹೆ ಸೂಚನೆಗಳು ಹಾಗೂ ಕೆಲವು ಮಾತುಗಳನ್ನು ಹೇಳಬೇಕೆಂದು ನಾನು ನಿಂತಿದ್ದೇನೆ. ಇದು 18ನೇ ಮಾರ್ಚ್ 1998 ರ ಆಯವ್ಯಯ ಒಳ್ಳೆಯ ಆಯವ್ಯಯವಾಗಿ ಬರಬಹುದೆಂದು ನಾನು ಭಾವಿಸಿದ್ದೆ. ಏಕೆಂದರೆ, ಅವರು ಯಾವಾಗಲೂ ಈ ಮಾರ್ಚ್ 18ನೇ ತಾರೀಖನ್ನೇ ಆಯ್ಕೆ ಮಾಡಿಕೊಳ್ಳುವಂತೆ ಕಾಣುತ್ತದೆ. ಕಳೆದ ಸಾರಿಯೂ ಕೂಡ ತಮ್ಮ ಆಯವ್ಯಯವನ್ನು 18ನೇ ಮಾರ್ಚ್ ರಂದೇ ಮಂಡನೆ ಮಾಡಿದರು. ಈಗ ಯಾರೋ, ಸಿದ್ದರಾಮಯ್ಯನವರು ಏತಕ್ಕೆ ಬೇಗ ಬರಲಿಲ್ಲವೆಂದರೆ, ಮೂರು ಗಂಟೆಯವರೆಗೆ ರಾಹುಕಾಲವಿದೆ, ಮೂರು ಗಂಟೆಯಾದ ಮೇಲೆ ಬರುತ್ತಾರೆಂದು ಹೇಳುತ್ತಿದ್ದರು. ನಾನು, ಇಲ್ಲ, ಅವರು ಸಮಾಜವಾದದಲ್ಲಿ ನಂಬಿಕೆ ಇರತಕ್ಕಂಥವರು ಮತ್ತು ಮುಖ್ಯಮಂತ್ರಿಗಳೂ ಕೂಡ ಸಮಾಜವಾದಿಗಳು, ಇವರು ಸಮಾಜ ವಾದಿಗಳು ಬಹುಶಃ ಅದರ ಮೇಲೆ ನಂಬಿಕೆ ಇಲ್ಲವೆಂದು ತಿಳಿದುಕೊಂಡಿದ್ದೆ. ಆದರೆ ಇವರು ಬರುವುದು ನೋಡಿದರೆ ಕಾಕತಾಳಿನ್ಯಾಯವಿದ್ದ ಹಾಗೆ ಅವರೂ ಕೂಡ ಮೂರೂವರೆ ಗಂಟೆಗೆ ಬಂದರು. ಬಹುಶಃ ರಾಹುಕಾಲ ಮುಗಿದ ಮೇಲೆ ಅವರು ವಿಧಾನಸೌಧಕ್ಕೆ ಪಾದಾರ್ಪಣೆ ಮಾಡಿದಂತೆ ಕಾಣುತ್ತದೆ. ಅವರು ಇವತ್ತೇನು ಆಯವ್ಯಯವನ್ನು ಮಂಡಿಸಿದ್ದಾರೆ, ಇದನ್ನು ನೋಡಿದ ಮೇಲೆ ನನಗೆ ಏನು ಅನ್ನಿಸುತ್ತಿದೆ ಎಂದರೆ, ನಿಜವಾಗಿಯೂ ಈ ಸರ್ಕಾರಕ್ಕೆ ಬಡವರ ಬಗ್ಗೆ ಆಸಕ್ತಿ ಇಲ್ಲ ಎನ್ನುವ ಮಾತನ್ನು ನಾನು ಸ್ಪಷ್ಟವಾಗಿ ಹೇಳಬಹುದು. ಏಕೆಂದರೆ ಯಾವುದೇ ಒಂದು ಸರ್ಕಾರದ ಆಯವ್ಯಯವನ್ನು ಮಂಡಿಸಬೇಕಾದರೆ, ಅದರ ಹಿನ್ನೆಲೆ, ಅವರ ವಿಚಾರಧಾರೆ ಮತ್ತು ಆ ಸರ್ಕಾರ ಯಾವ ನ್ಯಾಯ ಮತ್ತು ನೀತಿಯ ಮೇಲೆ ನಡೆದುಕೊಳ್ಳಬೇಕೆಂದು ಒಂದು ವಿಚಾರವನ್ನು ಮಾಡಿ ಆದೇ ದಿಕ್ಕಿನಲ್ಲಿ ತನ್ನ ಆಯವ್ಯಯವನ್ನು ಅಳವಡಿಸಿಕೊಂಡು ಬರತಕ್ಕಂಥ ಪ್ರಯತ್ನವನ್ನು ಮಾಡುತ್ತಾರೆ. ಇದು ಸಾಮಾಜಿಕನ್ಯಾಯದ ಮೇಲೆ ವಿಶ್ವಾಸರಿರತಕ್ಕಂಥ ವಿಶ್ವಾಸವನ್ನು ಇಟ್ಟಿದ್ದೇವೆಂದು ಹೇಳಿ ಕೊಂಡು ಈ ಸರ್ಕಾರ ಬಂದಿದೆ. ರೈತರ ಬಗ್ಗೆಯೂ ಸಾಕಷ್ಟು ಅನುಕಂಪವಿದೆ, ಅವರ ಬಗ್ಗೆಯೂ ಕೂಡ ನಾವು ಚಿಂತನೆ ಮಾಡುತ್ತೇವೆಂದು ಹೇಳಿಕೊಂಡು ಇವರು ಅಧಿಕಾರಕ್ಕೆ ಬಂದಿದ್ದಾರೆ. ಆದೇ ರೀತಿ ಬಡವರ್ಗದವರಿಗೆ, ಸಾಮಾನ್ಯ ಜನರಿಗೆ ನಾವು, ಅವರ ಕಷ್ಟ ಸುಖಗಳಲ್ಲಿ ಭಾಗಿಯಾಗಿ ಅವರ ಕಷ್ಟಗಳನ್ನು ನಿವಾರಣೆ ಮಾಡುತ್ತೇವೆಂದು ಅಧಿಕಾರವನ್ನು ವಹಿಸಿಕೊಂಡಿದ್ದಾರೆ. ಇದೆಲ್ಲವನ್ನೂ ನೋಡಿದಾಗ ಇವತ್ತಿನ ಆಯವ್ಯಯ ಬಡವರಿಗೆ ಅನುಕೂಲವಾಗತಕ್ಕಂಥ ಆಯವ್ಯವಾಗಿದೆಯೇ ಅಥವಾ ಇವತ್ತಿನ ಆಯವ್ಯಯ, ಸಾಮಾನ್ಯ ರೈತರಿಗೆ ಅನುಕೂಲವಾಗತಕ್ಕಂಥ ಆಯವ್ಯಯ ಪರಿಶಿಷ್ಟಜನಾಂಗದವರಿಗೆ ಸಹಾಯ ಮಾಡತಕ್ಕಂಥ ದಿಕ್ಕಿನಲ್ಲಿರುವ ಆಯವ್ಯಯವಾಗಿದೆಯೇ ಮತ್ತು ತಮ್ಮ ಹಿಂದಿನ ಅಲೋಕೇಷನ್ಸ್ ಅನ್ನು ತೆಗೆದುಕೊಂಡಾಗ, ಆದು ಕೃಷಿರಂಗವಿರಬಹುದು, ಗ್ರಾಮೀಣ ರಂಗದಲ್ಲೇ ಇರಬಹುದು, ಶಿಕ್ಷಣರಂಗವಿರಬಹುದು, ಸಮಾಜ ಕಲ್ಯಾಣರಂಗವಿರಬಹುದು, ವಿದ್ಯುತ್ ಸೇರಿದಂತೆ

ಇವೆಲ್ಲವನ್ನೂ ನೀವು ನೋಡಿದಾಗ ನಾವು ಕಡಿತವನ್ನು ಕಾಣಬಹುದೇ ಹೊರತು ಅದರಲ್ಲಿ ನೀವು ಹೆಚ್ಚಿನ ಹಣವನ್ನು ಸಂಗ್ರಹಿಸಿ ಅವಕ್ಕೆ ಕೊಡತಕ್ಕಂಥ ಪ್ರಯತ್ನವನ್ನು ಮಾಡಿಲ್ಲವೆನ್ನುವುದನ್ನು ಸ್ಪಷ್ಟವಾಗಿ ನೀವೇ ಇದರಲ್ಲಿ ಹೇಳಿಕೊಂಡಿದ್ದೀರಿ. ಕಳೆದ ಸಾರಿಯ ಆಯವ್ಯಯ ಮತ್ತು ಈ ಸಾರಿಯ ಆಯವ್ಯಯ ಇವೆರಡನ್ನೂ ಹೊಲಿಸಿ ನೋಡಿದಾಗ ಶೇಕಡ ಎಷ್ಟು ಹಣವನ್ನು ನೀವು ಕಡಿಮೆ ಮಾಡಿದ್ದೀರಿ, ಈ ಹಣದುಬ್ಬರವಿದ್ದರೂ ಕೂಡ ನಿಮ್ಮ ಅಲೋಕೇಷನ್ ಹೆಚ್ಚಿನ ಪ್ರಮಾಣದಲ್ಲಿ ಇವತ್ತು ಆಗಿದೆಯೇ ಎನ್ನುವುದನ್ನು ನೀವೇ ಆತ್ಮಸಾಕ್ಷಿಯಾಗಿ ಹೇಳಬೇಕು.

ಇವತ್ತು ನೀವು ಸಾಧನೆ ಮಾಡಿದ್ದಾರೂ ಏನು? ಒಂದು ಕಡೆ ಶ್ರೀಸಾಮಾನ್ಯನಿಗೆ ತೊಂದರೆಯಾಗತಕ್ಕಂತಹ, ಅತ ಕಷ್ಟವನ್ನು ಅನುಭವಿಸತಕ್ಕಂಹ ಬಡ್ಜೆಟ್ ಅನ್ನು ಕೊಟ್ಟಿದ್ದೀರಿ. ನೀವು ನಿಮ್ಮ ಬಡ್ಜೆಟ್ ಬಗ್ಗೆ ಎಲ್ಲಾ ಪತ್ರಿಕೆಗಳಲ್ಲಿ ಬಂದಿರತಕ್ಕ ಸಂಪಾದಕೀಯಗಳನ್ನು ಓದಿರಬಹುದು. ಯಾವ ಪತ್ರಿಕೆಯ ಸಂಪಾದಕೀಯದಲ್ಲೂ ಕೂಡ ನೀವು ಮಂಡಿಸಿರುವ ಬಡ್ಜೆಟ್ ಎಂದು ಹೇಳಿಲ್ಲ. ನಾನು ಎಲ್ಲಾ ಪತ್ರಿಕೆಗಳ ಸಂಪಾದಕೀಯಗಳನ್ನು ಪೂರ್ತಿಯಾಗಿ ಓದಿಕೊಂಡು ಬಂದೇ ಈ ಮಾತುಗಳನ್ನು ಇಲ್ಲಿ ಹೇಳುತ್ತಿದ್ದೇನೆ. ಬೇಕಾದರೆ ನಾನು ಅವುಗಳನ್ನು ನಿಮಗೆ ಕಳುಹಿಸಿಕೊಡುತ್ತೇನೆ, ನೀವೇ ಓದಿ ನೋಡಿ. ನೀವು ಅವುಗಳನ್ನು ಹೇಗೆ ಅರ್ಥ ಮಾಡಿಕೊಳ್ಳುತ್ತೇರೋ ಗೊತ್ತಿಲ್ಲ. ಈ ಬಡ್ಜೆಟ್‌ನಲ್ಲಿ ನೀವು ವಿಶೇಷವಾಗಿ ಮಾಡಿದ್ದಾದರೂ ಏನು? 'ಅಭಿವೃದ್ಧಿಗಾಗಿ ತೆರಿಗೆ' ಎನ್ನತಕ್ಕಂತಹ ಮಾತನ್ನು ನೀವು ಈ ಬಡ್ಜೆಟ್‌ನಲ್ಲಿ ಹೇಳಿ ಸುಮಾರು 230 ಕೋಟಿ ರೂ.ಗಳ ಒಂದು ತೆರಿಗೆಯನ್ನು ಹಾಕತಕ್ಕಂತಹ ಒಂದು ಪ್ರಯತ್ನವನ್ನು ತಾವು ಮಾಡಿದ್ದೀರಿ. ನೀವು ಈ ರೀತಿಯಾಗಿ ಹೊಸ ತೆರಿಗೆಗಳನ್ನು ಹಾಕಿರುವುದನ್ನು ಯಾವ ರೀತಿ ಸಮರ್ಥಿಸಿಕೊಂಡಿದ್ದೀರಿ ಎಂದರೆ, ಮೂಲಭೂತವಾದ ಸೌಕರ್ಯವನ್ನು ಪಟ್ಟಣಗಳಲ್ಲಿ ಕೊಡಬೇಕೆಂಬ ದೃಷ್ಟಿಯಿಂದ, ಇಡೀ ರಾಜ್ಯದ ಜನತೆಯ ಮೇಲೆ ಎರಡು ವರ್ಷಕ್ಕಾಗಿ ಈ ಒಂದು ಟ್ಯಕ್ಸ್ ಅನ್ನು ಹಾಕುತ್ತಿದ್ದೇವೆ ಎಂಬ ಮಾತನ್ನು ನೀವು ಹೇಳಿದ್ದೀರಿ. ಪೆಟ್ರೋಲ್, ಡೀಸಲ್ ಇತ್ಯಾದಿಗಳ ಮೇಲೆ ಬೆಂಗಳೂರು ನಗರಕ್ಕೆ ಮಾತ್ರ ಸೀಮಿತವಾಗಿದ್ದಂತಹ ತೆರಿಗೆಗಳನ್ನು ತಾವು ಈಗ ಇಡೀ ರಾಜ್ಯದ ಜನತೆಯ ಮೇಲೆ ಹಾಕಿ, ಸುಮಾರು 110 ಕೋಟಿ ರೂ.ಗಳನ್ನು ನಾನು ಇದರಿಂದ ಸಂಗ್ರಹಣೆ ಮಾಡುತ್ತೇನೆ, ಅದಕ್ಕಿಂತ ಹೆಚ್ಚಿನ ಸಂಗ್ರಹಣೆ ಮಾಡುವ ಗುರಿ ಇದೆ ಎಂಬ ಮಾತನ್ನು ತಮ್ಮ ಬಡ್ಜೆಟ್‌ನಲ್ಲಿ ಹೇಳಿದ್ದೀರಿ. ಆದರೆ ನಾನು ಕೇಳುತ್ತೇನೆ, ನೀವು ಸೌಲಭ್ಯ ಕೊಡುತ್ತಿರುವುದು ಯಾರಿಗೆ? ಟ್ಯಾಕ್ಸ್ ಹಾಕುತ್ತಿರುವುದು ಯಾರಿಗೆ? ಪಟ್ಟಣಗಳಲ್ಲಿರತಕ್ಕಂತಹ ಜನರಿಗೆ ಸವಲತ್ತುಗಳನ್ನು ಕೊಡುತ್ತಿದ್ದೀರಿ. ಪಟ್ಟಣದಲ್ಲಿರತಕ್ಕ ಜನರಿಗೆ ಅನುಕೂಲ ಮಾಡಿಕೊಡಬೇಕೆಂದು ಹೇಳಿ ಇಡೀ ರಾಜ್ಯಕ್ಕೆ ತೆರಿಗೆ ವಿಧಿಸುತ್ತಿದ್ದೀರಿ. ಕೆಳವೆಡೆ ನಬಾರ್ಡ್‌ನಿಂದ ಪಡೆದುಕೊಂಡ ಸಾಲದ ಹಣ ಬಳಸಿ ರಸ್ತೆ, ಸೇತುವೆಗಳನ್ನು ಕಟ್ಟುತ್ತಿದ್ದೀರಿ. ಈ ರಸ್ತೆ ಮತ್ತು ಸೇತುವೆಗಳನ್ನು ಬಿಟ್ಟರೂ ಕೂಡ, ಉಳಿದಂತಹ ಮೆಟ್ರೋಪಾಲಿಟನ್ ಸಿಟಿಗಳಲ್ಲಿ ಏನೇನು ಸವಲತ್ತುಗಳು ಇವೆಯೋ, ಆ ಸವಲತ್ತುಗಳನ್ನೂ ಕೂಡ ಇವತ್ತು ಪಟ್ಟಣಗಳಲ್ಲಿ ಕೊಡುವುದಕ್ಕೋಸ್ಕರ ನೀವು ಹೆಚ್ಚಿನ ಟ್ಯಾಕ್ಸ್ ಅನ್ನು ಇವತ್ತು ಹಾಕತಕ್ಕಥ ಪ್ರಯತ್ನ ಮಾಡಿದ್ದೀರಿ. ರಸ್ತೆ ಮತ್ತು ಸೇತುವೆ ನಿರ್ಮಾಣಕ್ಕಾಗಿ ತೆರಿಗೆ ಹಾಕುತ್ತಿದ್ದೇವೆ ಎಂಬುದು ಒಂದು ನೆಪ ಮಾತ್ರ. ರಸ್ತೆ ಮತ್ತು ಸೇತುವೆಗಳಿಗಾಗಿ ಇವತ್ತು ನೀವು ಕೋಟಿಗಟ್ಟಲೆ ಹಣವನ್ನು ನಬಾರ್ಡ್‌ನಿಂದ ಸಾಲ

ತರುತ್ತಿದ್ದೀರಿ. ಒಂದೆಡೆ ಅಲ್ಲಿಂದ ರಸ್ತೆ, ಸೇತುವೆಗಳಿಗಾಗಿ ಬಡ್ಡಿ ಕೊಟ್ಟು ಸಾಲ ಪಡೆದುಕೊಳ್ಳುತ್ತಿದ್ದೀರಿ. ಪುನಃ ಈ ಕಡೆ ರಸ್ತೆ, ಸೇತುವೆ ಕಟ್ಟುವ ಹೆಸರಿನಲ್ಲಿ ಹೊಸ ಟ್ಯಾಕ್ಸ್ ಹಾಕುತ್ತಿದ್ದೀರಿ. ಯಾವ ಸರ್ಕಾವವೂ ಕೂಡ ಹಿಂದೆ ಈ ಕೆಲಸವನ್ನು ಮಾಡಿರಲಿಲ್ಲ. ಹಿಂದಿದ್ದ ಜನತಾದಳ ಸರ್ಕಾರ ಇರಬಹುದು, ಕಾಂಗ್ರೆಸ್ ಪಕ್ಷದ ಸರ್ಕಾರಗಳು ಸುಮಾರು ಹತ್ತಾರು ವರ್ಷಗಳ ಕಾಲ ಆಳಿದಂತಹವು ಇರಬಹುದು, ಹಿಂದೆ ಕಾಂಗ್ರೆಸ್ (ಒ) ಸರ್ಕಾರ ಇದ್ದಾಗ ಇರಬಹುದು ಅಥವಾ ಕಾಂಗ್ರೆಸ್ ಕೂಡಿರತಕ್ಕ ಸರ್ಕಾರ ಇರಬಹುದು, ಯಾವ ಸರ್ಕಾರಗಳೂ ಕೂಡ ಇಂತಹ ಯೋಜನೆ, ಇಂತಹ ಚಿಂತನೆ ಮಾಡಿರಲಿಲ್ಲ. ಆದರೆ ಅದು ನಿಮಗೆ ಈಗ ಹೊಳೆದಿದೆ. ಹಿಂದೆ ನೀವು ಅಧಿಕಾರ ಮಾಡಿದ್ದ ಅವಧಿಯೂ ಸೇರಿ ಒಂಭತ್ತು ವರ್ಷ ನೀವು ಆಳ್ವಿಕೆ ಮಾಡಿದ ಮೇಲೆ, 10ನೇ ವರ್ಷಕ್ಕೆ ಇಂತಹದ್ದೊಂದು ಟ್ಯಾಕ್ಸ್ ಹಾಕಬೇಕೆಂದು ನಿಮಗೆ ಹೊಳೆದಿದೆ. ಭಾರತ ದೇಶದಲ್ಲಿ ಇವತ್ತು ಅತ್ಯಂತ ಹೆಚ್ಚಿನ ತೆರಿಗೆ ಕೊಡುತ್ತಿರುವ ರಾಜ್ಯ ಎಂದರೆ ಕರ್ನಾಟಕ ರಾಜ್ಯವಾಗಿದೆ. ಭಾರತ ದೇಶದ ಬೇರೆ ಯಾವ ರಾಜ್ಯದಲ್ಲೂ ಜನತೆಯ ಮೇಲೆ ಇಷ್ಟೊಂದು ತೆರಿಗೆಗಳನ್ನು ಹಾಕಿಲ್ಲ. ನೀವೇನಾದರೂ ತೆರಿಗೆಗಳನ್ನು ಕಡಿಮೆ ಮಾಡುತ್ತೀರಿ ಎಂದು ನಾನು ಅಂದುಕೊಂಡಿದ್ದೆ. ಆದರೆ ಜನರ ಮೇಲಿನ ಸಿಟ್ಟನ್ನು ತೀರಿಸಿಕೊಳ್ಳುವ ದೃಷ್ಟಿಯಿಂದ ಈ ರೀತಿ ಹೊಸ ತೆರಿಗೆಗಳನ್ನು ನೀವು ಹಾಕಿದ್ದೀರಿ. ಮಾನ್ಯ ಮುಖ್ಯಮಂತ್ರಿಗಳು ಹಾಗೂ ಉಪ ಮುಖ್ಯಮಂತ್ರಿಗಳು ಇಬ್ಬರೂ ಕೂಡಿ ಈ ಬಗ್ಗೆ ಮಾತನಾಡಿಕೊಂಡಿರಬೇಕು. ನಾವು ಎಷ್ಟು ಕೆಲಸ ಮಾಡಿದರೂ, ಸಾಮಾಜಿಕ ನ್ಯಾಯ ಕೊಡುತ್ತೇವೆ, ಅದು ಕೊಡುತ್ತೇವೆ, ಇದು ಕೊಡುತ್ತೇವೆ ಎಂದು ಕಳೆದು ಮೂರು ವರ್ಷಗಳಲ್ಲಿ ನಾವು ಸಾಕಷ್ಟು ಹೇಳಿದರೂ ಕೂಡ ಜನತೆ ನಮಗೆ ಕಳೆದ ಲೋಕಸಭಾ ಚುನಾವಣೆಯಲ್ಲಿ ಮತ ನೀಡಲಿಲ್ಲವಲ್ಲ, ಅದಕ್ಕಾಗಿ ಜನತೆಯ ಮೇಲೆ ಸಿಕ್ಕಾಪಟ್ಟೆ ಟ್ಯಾಕ್ಸ್ ಹಾಕಿ, ಮುಂದೆ ಅವರು ಏನು ಮಾಡುತ್ತಾರೋ ನೋಡಿಕೊಳ್ಳೋಣ ಎಂಬ ದೃಷ್ಟಿಯಿಂದ ಜನತೆಯ ಮೇಲೆ ರಿವೇಂಜ್ ತೆಗೆದುಕೊಳ್ಳತಕ್ಕ ದೃಷ್ಟಿಯಿಂದ ಈ ಎಲ್ಲಾ ತೆರಿಗೆಗಳನ್ನು ನೀವು ಹಾಕಿದ್ದೀರಿ ಎಂದು ನಾನು ಹೇಳಬೇಕಾಗುತ್ತದೆ. 176 ಐಟಂಗಳ ಪೈಕಿ 156 ಐಟಂಗಳ ಮೇಲಿದ್ದ ತೆರಿಗೆಯನ್ನು ನೀವು 8ರಿಂದ 10ಕ್ಕೆ ಏರಿಸಿದ್ದೀರಿ. ಎಲ್ಲೆಲ್ಲಿ, ಯಾರ್ಯಾರಿಗೆ ನಿಮಗೆ ಸಹಾಯ ಮಾಡಬೇಕು ಅನ್ನಿಸಿದೆಯೋ ಅಂತಹ ಕಡೆ ಮಾತ್ರ ತೆರಿಗೆಯನ್ನು ಶೇಕಡ 12ರಿಂದ 10ಕ್ಕೆ ಇಳಿಸಿದ್ದೀರಿ. ಎಲ್ಲೆಲ್ಲಿ ನೀವು ತೆರಿಗೆ ದರವನ್ನು ಶೇಕಡ 8ರಿಂದ 10ಕ್ಕೆ ಏರಿಸಿದ್ದೀರಿ, ಅದರ ಬಗ್ಗೆ ನನ್ನ ಹತ್ತಿರ ಒಂದು ದೊಡ್ಡ ಪಟ್ಟಿಯೇ ಇದೆ. ನಾನು ಎಲ್ಲವನ್ನೂ ಕೂಡ ಇಲ್ಲಿ ಓದುವುದಕ್ಕೆ ಹೋಗುವುದಿಲ್ಲ. ನಾವು ಬಡವರ ಪರವಾಗಿದ್ದೇವೆ, ರೈತರ ಪರವಾಗಿದ್ದೇವೆ, ನಾವು ಸಾಮಾಜಿಕ ನ್ಯಾಯ ಕೊಡುತ್ತೇವೆ ಎಂದೆಲ್ಲಾ ನೀವು ಹೇಳಿಕೊಳ್ಳುತ್ತೀರಿ. ಈಗ ನಿಮಗೆ ಅಧಿಕಾರ ಸಿಕ್ಕಿದೆ, ನಿಮ್ಮ 20-25 ವರ್ಷಗಳ ಐಡಿಯಾಲಜಿಗಳನ್ನೆಲ್ಲಾ ಈಗ ನೀವು ಆಚರಣೆಗೆ ತರುತ್ತೀರಿ ಎಂದು ನಾನು ತಿಳಿದುಕೊಂಡಿದ್ದೆ. ಆದರೆ ನೀವು ಯಾವುದನ್ನೂ ಆಚರಣೆಗೆ ತರಲಿಲ್ಲ. ಯಾರು ನಮಗೆ ಏನೂ ಐಡಿಯಾಲಜಿ ಇಲ್ಲವೆಂದು ಹೇಳುತ್ತಾರೋ, ಅವರಿಗೆ ನಾವು ಏನೂ ಟೀಕೆ ಮಾಡತಕ್ಕ ಅವಶ್ಯಕತೆ ಇಲ್ಲ. ಆದರೆ ಇಂತಿಂಥ ಐಡಿಯಾಲಜಿಗಳು ನಮಗೆ ಇವೆ ಎಂದು ನೀವು ಹೇಳಿಕೊಂಡು ಬಂದ ಮೇಲೆ, ಅಟ್‌ಲೀಸ್ಟ್ ಆ ಸೌಜನ್ಯಕ್ಕಾದರೂ ನೀವು ಸ್ಪಿಕಾನ್ ಆಗಿ ಕೆಲವು ಕಾರ್ಯಕ್ರಮಗಳನ್ನು ಆದರೂ ಹಾಕೊಳ್ಳಬೇಕಾಗಿತ್ತು. ಜನ ನಮಗೆ ಏನೂ ಕೇಳುವುದಿಲ್ಲ ಅಥವಾ ಜನರೇನೂ ರೊಚ್ಚಿಗೇಳುವುದಿಲ್ಲ ಎಂದು ತಿಳಿದುಕೊಂಡು, ನಮಗೆ ಅಧಿಕಾರ ಸಿಕ್ಕಿದೆ, ನಾವು ಇಷ್ಟರಲ್ಲೇ ತೃಪ್ತಿ ಪಟ್ಟುಕೊಳ್ಳೋಣ,

ನಮಗೆ ಇರತಕ್ಕ ಅಧಿಕಾರವನ್ನು ಉಳಿಸಿಕೊಳ್ಳೋಣ ಎಂದುಕೊಂಡು ನೀವು ಈ ರೀತಿಯಾಗಿ ಮಾಡಿದ್ದೀರಿ. ಈಗಾಗಲೇ ನೀವು ಇತ್ತೀಚಿನ ರಾಜ್ಯಸಭಾ ಚುನಾವಣೆಯಲ್ಲಿ ಯಾವುದೋ ಒಂದು ಅಂಡರ್‌ಸ್ಟ್ಯಾಂಡಿಂಗ್ ಮಾಡಿಕೊಂಡು, ಪ್ರೀತಿ, ವಿಶ್ವಾಸವನ್ನು ಹುಟ್ಟಿಸಿಕೊಂಡು ಒಂದು ಸೀಟನ್ನು ಬೇರೆಯವರಿಗೆ ಬಿಚ್ಚು ಕೊಟ್ಟಿದ್ದೀರಿ. ರಾಜ್ಯಸಭಾ ಚುನಾವಣೆಗೆ ಮತದಾನ ನಡೆದರೆ ಯಾವ ಕಡೆ ಎಷ್ಟು ಓಟು ಹೋಗುತ್ತದೆ ಎಂಬುದು ಗೊತ್ತಾಗುತ್ತದೆ, ಆ ರೀತಿ ಗೊತ್ತಾಗುವುದು ಬೇಡ ಎಂದುಹೇಳಿ 36 ಜನ ಸದಸ್ಯರಿದ್ದ ಪಕ್ಷದವರಿಗೂ ಸಹಾ ನೀವು ನಮ್ಮ ತಂಟೆಗೆ ಬರಬೇಡಿ, ನಮ್ಮ ಗೋಜಿಗೆ ಬರಬೇಡಿ ಎಂದುಹೇಳಿ ಸೀಟನ್ನು ಅವರಿಗೆ ಭಕ್ಷೀನ್ ಕೊಟ್ಟು ನೀವಿಲ್ಲಿ ಕುಳಿತುಕೊಂಡಿದ್ದೀರಿ. ಎರಡು ವರ್ಷಗಳ ಹಿಂದೆ 39 ಜನ ಸದಸ್ಯರಿದ್ದರೂ ಸಹ, ಹೋರಾಟ ನಡೆಸಿದರೂ ಸಹ ಆ ವರ್ಷಕ್ಕೆ ರಾಜ್ಯಸಭಾ ಸೀಟು ಸಿಗಲಿಲ. ಈಗ ಕೇವಲ 36 ಜನ ಸದಸ್ಯರು ಇರುವ ಭಾರತೀಯ ಜನತಾ ಪಕ್ಷದಿಂದ ಒಬ್ಬ ರಾಜ್ಯಸಭಾ ಸದಸ್ಯರಾಗಿ ಆರಿಸಿ ಹೋಗಬೇಕಾದರೆ, ಎಷ್ಟು ಪ್ರೀತಿ ವಿಶ್ವಾಸ ಗಳಿಸಿಕೊಂಡು ಸೀವು ಕುರ್ಚಿಯನ್ನು ಮಜಭೂತಾಗಿ ಮಾಡಿಕೊಂಡಿದ್ದೀರಿ ಎಂದು ಇದರಿಂದ ಗೊತ್ತಾಗುತ್ತದೆ. ಆದಕ್ಕೆ ಇದೊಂದು ತಕ್ಕ ಉದಾಹರಣೆಯಾಗಿದೆ. ಹೀಗಿರುವಾಗ ನೀವ್ಯಾಕೆ ಐಡಿಯಾಲಜಿ ಬಗ್ಗೆ ಯಾತನಾಡಬೇಕು? ಮನುಷ್ಯನಿಗೆ ಅವಕಾಶ ಸಿಕ್ಕಾಗ ಅವನು ಅಟ್‌ಲೀಸ್ಟ್ ಕೆಲವು ಐಡಿಯಾಲಜಿಗಳನ್ನಾದರೂ ಇಂಪ್ಲಿಮೆಂಟ್ ಮಾಡಬೇಕೆಂದು ನಾನು ತಿಳಿದುಕೊಂಡಿದ್ದೆ. ಆದಕ್ಕೆ ಹಣ ಸಂಗ್ರಹ ಮಾಡಬೇಕು, ಅಥವಾ ಇಂತಹ ಟ್ಯಾಕ್ಸ್ ಹಾಕಿದರೆ ಸಾಮಾನ್ಯ ಜನರಿಗೆ ಉಪಯೋಗವಾಗುತ್ತದೆ ಅಥವಾ ಇಂತಹ ಟ್ಯಾಕ್ಸ್ ಹಾಕಿದರೆ ಸಾಮಾನ್ಯ ಜನರಿಗೆ ಉಪಯೋಗವಾಗುತ್ತದೆ ಅಥವಾ ಸಾಮಾನ್ಯ ಜನರಿಂದ ತೆಗೆದುಕೊಂಡಂತಹ ಟ್ಯಾಕ್ಸ್, ಸಂಗ್ರಹಿಸಿದಂತಹ ಹಣವನ್ನು ಇಂತಹ ಕೆಲಸಗಳಿಗೆ ನಾವು ಉಪಯೋಗ ಮಾಡಿದರೆ, ಆ ಒಂದು ಸಾಮಾನ್ಯ ಜನರ ಏಳಿಗೆಯಾಗುತ್ತದೆ ಅನ್ನತಕ್ಕಂತಹ ಯೋಜನೆ, ಚಿಂತನೆ ಮಾಡಿ ನಾವು ಆದನ್ನು ಮಾಡಬೇಕಾಗುತ್ತದೆ. ಆದರೆ ಇವತ್ತು ಇವರು ದುಬಾರಿ ಮಾಡಿದ್ದಾದರೂ ಯಾವುದಕ್ಕೆ? ಕಂಚು ಮತ್ತು ಹಿತ್ತಾಳೆ ಪಾತ್ರೆಗಳ ಮೇಲಿನ ತೆರಿಗೆ ದರವನ್ನು 8ರಿಂದ 10ಕ್ಕೆ ಏರಿಸಿದ್ದೀರಿ. ಈ ರೀತಿ ಕಂಟು ಮತ್ತು ಹಿತ್ತಾಳೆ ಪಾತ್ರೆಗಳನ್ನು ದೊಡ್ಡ ದೊಡ್ಡ ಶ್ರೀಮಂತರು ಉಪಯೋಗ ಮಾಡುತ್ತಾರೆಯೇ? ಮಧ್ಯಮ ವರ್ಗದ ಜನ, ಹಳ್ಳಿಯಲ್ಲಿರತಕ್ಕಂತಹ ಎಲ್ಲರೂ ಕೂಡ ಇವುಗಳನ್ನು ಉಪಯೋಗ ಮಾಡುತ್ತಾರೆ. ನೀವು ಯಾರನ್ನು ಬೇಕಾದರೂ ನೋಡಬಹುದು. ಸಾಮಾನ್ಯ ಜನರು, ರೈತರು, ಹಳ್ಳಿಗಳಲ್ಲಿ ಅನೇಕ ಬಡ ಜನರು ಉಪಯೋಗ ಮಾಡತಕ್ಕ ವಸ್ತುಗಳಿವು. ಎರಡನೆಯದಾಗಿ, ಬಡ್ಜೆಟ್‌ನಲ್ಲಿ ಅಲ್ಯೂಮಿನಿಯಂ ವಸ್ತುಗಳ ಮೇಲೂ ತೆರಿಗೆ ಜಾಸ್ತಿ ಮಾಡಿದ್ದಾರೆ. ಶ್ರೀಮಂತರು ಈ ಅಲ್ಯೂಮಿನಿಯಂ ವಸ್ತುಗಳನ್ನು ಉಪಯೋಗ ಮಾಡುತ್ತಾರೆಯೇ? ಫೋಟೋಗ್ರಫಿ ಮೇಲೆ ತೆರಿಗೆ ಹಾಕಿದ್ದೀರಿ. ಡೀಸಲ್ ಇಂಥನ ಮೇಲೆ ಹಾಕಿದ್ದೀರಿ, ನಿಮಗೆ ಗೊತ್ತಿದ್ದಂತೆ ಅನೇಕ ಕಡೆ ರೈತರು ಇವುಗಳನ್ನು ಉಪಯೋಗ ಮಾಡುತ್ತಿದ್ದಾರೆ. ಅವುಗಳ ಮೇಲೆ ಕೂಡ ತೆರಿಗೆಯನ್ನು ನೀವು ಶೇಕಡ 8ರಿಂದ 10ಕ್ಕೆ ಏರಿಸಿದ್ದೀರಿ. ನಿಮಗೆ ಗೊತ್ತಿದ್ದಂತೆ ಅನೇಕ ಕಡೆ ಗ್ರಾಮಾಂತರಗಳಲ್ಲಿ ಜನರು ಸಣ್ಣ ಪುಟ್ಟ ಅಂಗಡಿಗಳಲ್ಲೀ ಚಪ್ಪಲಿಗಳನ್ನು ಕೊಂಡುಕೊಳ್ಳುತ್ತಾರೆ. ಎಲ್ಲರೂ ಬಾಟಾ ಕಂಪೆನಿಗಳಿಗೇ ಹೋಗಿ ಖರೀದಿ ಮಾಡುವುದಿಲ್ಲ.

ಶ್ರೀ ಸಿದ್ದರಾಮಯ್ಯ:- ನಾನು ನಿಮಗೆ ಒಂದು ಸ್ಪಷ್ಟೀಕರಣವನ್ನು ಈ ಹಂತದಲ್ಲಿ ಕೊಡಬಯಸುತ್ತೇನೆ. 100ರೂ. ಇರತಕ್ಕದ್ದು ಫಸ್ಟ್ ಪಾಯಿಂಟ್‌ನಲ್ಲಿ ಮ್ಯಾನುಫ್ಯಾಕ್ಚರಿಂಗ್ ಲೆವಲ್‌ನಲ್ಲಿ ಟ್ಯಾಕ್ಸಾಗುತ್ತದೆ. ಅಲ್ಲಿಯವರೆಗೆ ಶೇಕಡ 4ರಷ್ಟು ಇರುತ್ತದೆ. 100 ರೂ.ಗಳಿಗಿಂತ ಹೆಚ್ಚಿಗೆ ಇರತಕ್ಕದ್ದು ಶೇಕಡ 8ರಿಂದ 10ಕ್ಕೆ ಏರಿಕೆಯಾಗಿದೆ. ಇದು ರ್‍ಯಾಷನಲೈಸೇಷನ್ ಪ್ರೋಸಸ್‌ನಲ್ಲಿ ಹೀಗಾಗಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ನೀವು ರ್‍ಯಾಷನಲೈಸೇಷನ್ ಮಾಡುವುದಾದರೆ ಒಳ್ಳೆಯದಕ್ಕೆ ಮಾಡಬೇಕು. ರ್‍ಯಾಷನಲೈಸೇಷನ್‌ನಿಂದ ಬಡವರಿಗೆ ಅನುಕೂಲ ಆಗುವಂತಿರಬೇಕು, ಶ್ರೀಮಂತರಿಗೆ ಅನುಕೂಲ ಆಗುವಂತಿರಬಾರದು. ಇವತ್ತು ಟ್ಯಾಕ್ಸ್ ರ್‍ಯಾಷನಲೈಸೇಷನ್ ಹೆಸರಿನಲ್ಲಿ ನೀವು ನಾಲ್ಕು ಕ್ಯಾಟಗರಿ ಇದ್ದುದನ್ನು ಎರಡು ಕ್ಯಾಟಗರಿ ಮಾಡುತ್ತೇವೆಂದು ಹೇಳಿ, ಬಡವರಿಗೆ ಅನಾನುಕೂಲ ಮಾಡಿ ಶ್ರೀಮಂತರಿಗೆ ಅನುಕೂಲ ಮಾಡವುದಕ್ಕೆ ನಾವು ಹೋಗಬಾರದು.

3.50 ಪಿ.ಎಂ

ಬೇಕಾದರೆ ನೀವು ಶ್ರೀಮಂತರಿಗೆ ಅಷ್ಟೇ ತೆರಿಗೆಯನ್ನು ಇಟ್ಟು ಬಡವರಿಗೆ ಅನುಕೂಲವನ್ನು ಮಾಡಿಕೊಡುವಂಥ ವ್ಯವಸ್ಥೆ ಮಾಡಬಹುದಾಗಿತ್ತು. ಇದಕ್ಕೆ ಯಾರೂಬೇಡ ಎಂದು ಹೇಳುತ್ತಿದ್ದರು. ಸಾಮಾನ್ಯ ಜನರು ಮನೆಗಳ ಉಪಯೋಗ ಮಾಡುವಂಥ ಕಬ್ಬಿಣ, ಕಟ್ಟಡದ ವಸ್ತುಗಳ ಮೇಲೆ ತೆರಿಗೆಯನ್ನು ಹೆಚ್ಚು ಮಾಡಿದಿರಿ. ಕಬ್ಬಿಣವನ್ನೇನೋ ದೊಡ್ಡ ದೊಡ್ಡ ಉದ್ದಿಮೆದಾರರು ಉಪಯೋಗ ಮಾಡತಕ್ಕಂಥದ್ದು ಅಲ್ಲ. ಆ ಮೇಲೆ ಎಲ್ಲಾ ಬಗೆಯ ಇಂಕುಗಳ ಮೇಲೆ ತೆರಿಗೆಗಳನ್ನು ಹೆಚ್ಚು ಮಾಡಿದಿರಿ. ವಿದ್ಯಾರ್ಥಿಗಳು ಉಪಯೋಗಿಸತಕ್ಕಂಥ ಇಂಕು, ಬೇರೆಯವರು ಉಪಯೋಗಿಸತಕ್ಕಂಥ ಇಂಕು ಇದಕ್ಕೂ ಸಹ ತೆರಿಗೆಯನ್ನು ಹೆಚ್ಚು ಮಾಡಿದಿರಿ. ಇನ್ನು ಹೊಲಿಗೆಯ ಯಂತ್ರಕ್ಕೆ ಹೆಚ್ಚು ತೆರಿಗೆ ಮಾಡಿದ್ದೀರಿ. ಇದನ್ನು ಯಾರು ಉಪಯೋಗಿಸುತ್ತಾರೆ? ತಮಗೆ ಗೊತ್ತಿರುವಂತೆ ಟೈಲರುಗಳು, ಬಡವರು, ಹೆಣ್ಣುಮಕ್ಕಳುಗಳು ಸರ್ವೇಸಾಮಾನ್ಯವಾಗಿ ಒಂದು ಹೊಲಿಗೆ ಯಂತ್ರವನ್ನು ಇಟ್ಟುಕೊಂಡು ತಮ್ಮ ಜೀವನವನ್ನು ಸಾಗಿಸ ತಕ್ಕಂಥ ಅನೇಕ ಜನರು ನಮ್ಮ ಸಮಾಜದಲ್ಲಿ ಇದ್ದಾರೆ. ಅವರು ಹೊರಗಡೆ ಬಂದು ಟೈಲರಿಂದ್ ಅಂಗಡಿಯನ್ನು ತೆರೆಯುವುದಿಲ್ಲ. ತಮ್ಮ ಮನೆಯಲ್ಲಿಯೇ ಬಟ್ಟೆಗಳನ್ನು ತೆಗೆದುಕೊಂಡು ಹೋಗಿ ಹೊಲಿದುಕೊಳ್ಳುವವರು ಇರುತ್ತಾರೆ, ಮತ್ತು ಹೊಲಿದು ಕೊಡುವವರೂ ಸಹ ಇರುತ್ತಾರೆ. ಅಂತಹ ವಸ್ತುವಿನ ಮೇಲೂ ಸಹ ತಾವು ತೆರಿಗೆಯನ್ನು ಹೆಚ್ಚಿಗೆ ಮಾಡದೆ ಬಿಟ್ಟಿಲ್ಲ. ಹೊಲಿಗೆ ಯಂತ್ರಗಳ ಬಿಡಿ ಭಾಗಗಳ ಮೇಲೂ ತೆರಿಗೆಯನ್ನು ಹೆಚ್ಚು ಮಾಡಿದ್ದೀರಿ. ತೂಕದ ಯಂತ್ರದ ಮೇಲೆ ಸಹ ತೆರಿಗೆಯನ್ನು ಹೆಚ್ಚು ಮಾಡಿದಿರಿ. ಕನ್ನಡಕಗಳ ಮೇಲೂ ಸಹ ತೆರಿಗೆಯನ್ನು ಹೆಚ್ಚು ಮಾಡಿದ್ದೀರಿ. ಬಡ ಜನರು ಕಣ್ಣಿನ ಆಪರೇಷನ್ ಮಾಡಿಸಿಕೊಂಡ ಮೇಲೆ ಕನ್ನಡಕವನ್ನು ಎಷ್ಟೋ ಕಡೆ ಉಚಿತವಾಗಿ ಕೊಡುತ್ತಾರೆ. ಅಂತಹ ವಸ್ತುವಿನ ಮೇಲೆ ನೀವು ತೆರಿಗೆಯನ್ನು ಹೆಚ್ಚು ಮಾಡದೆ ಬಿಟ್ಟಿಲ್ಲ. ಈಗ ನಾನು ಹೇಳಿರತಕ್ಕಂಥ ವಸ್ತುಗಳೆಲ್ಲ ದೊಡ್ಡ ದೊಡ್ಡ ಶ್ರೀಮಂತರು ಉಪಯೋಗಿಸತಕ್ಕಂಥ ವಸ್ತುಗಳೇ? ನಾನು ಬರುವಾಗ ಯಾರೋ ಒಬ್ಬರೂ ದಾರಿಯಲ್ಲಿ ಸಿಕ್ಕಿದರು. ಆವರನ್ನು ನಾನು - 'ಏನು ಇಷ್ಟೊಂದು ಗಡ್ಡ ಬಿಟ್ಟಿದ್ದೀರಿ, ಏಕೆ ಎಂದು ಕೇಳಿದೆ. ಆದಕ್ಕೆ ಆವರು ಏನು ಹೇಳಿದರೆಂದರೆ - ಏನು ಮಾಡುವುದು ಸ್ವಾಮಿ, ನಾನು ನಿನ್ನೆಯ ದಿವಸ ಟ್ರೈನನಲ್ಲಿ ಬೆಂಗಳೂರಿಗೆ ಬಂದೆ. ಇವತ್ತು

ಬೇಗ ಹೋಗಿ ಶೇವ್ ಮಾಡಿಸಿಕೊಳ್ಳಬೇಕೆಂದು ಅಂಗಡಿಗೆ ಹೋದರೆ, ಅಲ್ಲಿ ಪೇಪರ್‌ನಲ್ಲಿ ಬ್ಲೇಡ್ ಮೇಲೆ ಶೇಕಡ 2 ರಷ್ಟು ತೆರಿಗೆ ಜಾಸ್ತಿ ಆಗಿರುವುದು ನೋಡಿ, ಏನು ಮಾಡುವುದು ಸಿದ್ದರಾಮಯ್ಯನವರು ಬ್ಲೇಡ್ ಮೇಲೂ ಸಹ ತೆರಿಗೆಯನ್ನು ಜಾಸ್ತಿ ಮಾಡಿರುವುದರಿಂದ ಇವತ್ತು ಶೇವ್ ಮಾಡಿ ಕೊಳ್ಳುವುದು ಬೇಡ, ನಾಳೆಯ ದಿವಸ ಶೇವ್ ಮಾಡಿಕೊಳ್ಳೋಣವೆಂದು ಬಿಟ್ಟಿದ್ದೇನೆ ಎಂದು ಹೇಳಿದರು.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಹಣಕಾಸಿನ ಸಚಿವರೇ, ಬ್ಲೇಡ್ ಬೆಲೆ ಜಾಸ್ತಿ ಆಯಿತೆಂದು ಗಡ್ಡ ತೆಗೆಯುವುದನ್ನು ಬಿಟ್ಟುಬಿಟ್ಟರು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ಗಡ್ಡದವರದ್ದೇ ಒಂದು ತರಹ ಸ್ಕೆಲ್. ಮಾನ್ಯ ರಾಮಕೃಷ್ಣ ಹೆಗಡೆಯವರು, ಸಿದ್ದರಾಮಯ್ಯನವರು, ಶರದ್‌ಯಾದವರೆವರು, ಶ್ರೀ ಪಾಸ್ವಾನ್ ರವರು ಇವರದೇ ಅದಂಥ ಒಂದು ಟೀಂ ಇದೆ. ಅಂದರೆ ಈ ಟೈಪ್ ಗಡ್ಡ ಬಿಡತಕ್ಕಂಥವರು ಸಮಾಜವಾದಿ ಪಕ್ಷದಲ್ಲಿ ಸಾಮಾಜಿಕ ನ್ಯಾಯ ಕೊಡತಕ್ಕಂಥವರು ಚಿಂತನೆ ಮಾಡತಕ್ಕಂಥವರು. ಆದಕ್ಕೋಸ್ಕರವಾಗಿ ಆ ರೀತಿ ಗಡ್ಡ ಬಿಟ್ಟವರ ಕಡೆಗೆ ಹೋಗಬೇಡಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಬಿ.ಜೆ.ಪಿ. ಯಲ್ಲಿ ಇರುವವರಿಗೂ ಸಹ ಗಡ್ಡ ಇದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಅದು ರಾಮನ ಗಡ್ಡ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ರಾಮನಿಗೆ ಗಡ್ಡವೇ ಇರಲಿಲ್ಲ.

ಅಧ್ಯಕ್ಷರು: ಹೋಗಲಿ ಬಿಡಿ, ರಾಮನ ಗಡ್ಡನೋ. ಆಂಜನೆಯನ ಬಾಲವೋ, ಅವರು ಮಾತನಾಡಲಿ, ಬಿಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ರೇಜರ್ ಮತ್ತು ಬ್ಲೇಡ್, ಬಟ್ಟೆ ಸೋಪು, ಸೀಮೆಎಣ್ಣೆ ಮತ್ತು ಗ್ಯಾಸ್, ಇವುಗಳನ್ನೆಲ್ಲ ಸಾಮಾನ್ಯ ಜನರು ಉಪಯೋಗಿಸುತ್ತಾರೋ ಹೇಗೆ ಎಂದು ಮಾನ್ಯ ಅರ್ಥ ಸಚಿವರು ಹೇಳಬೇಕು. ಮಕ್ಕಳಿಗೆ ಕೊಡತಕ್ಕಂಥ, ನಾವು ಯಾವಾಗಲಾದರೂ ಚುನಾವಣೆಗೆ ಅಥವಾ ಇನ್ನು ಯಾವುದಾದರೂ ಕೆಲಸಕ್ಕೆ ಹಳ್ಳಿಗೆ ಹೋದಾಗ, ಯಾರ ಮನೆಗೆ ಹೋದರೂ ಟೀ ಕೊಡುವ ಮೊದಲು ಬಿಸ್ಕತ್ತನ್ನು ತಂದು ಮುಂದಿಡುತ್ತಾರೆ. ಇದು ಸಾಮಾನ್ಯ ಜನ ಉಪಯೋಗಿಸುವಂಥದ್ದು ಆಗಿರುತ್ತದೆ. ಇದರ ಮೇಲೂ ಸಹ ತೆರಿಗೆಯನ್ನು ಹೆಚ್ಚುಮಾಡಿದ್ದಾರೆ. ಮೊದಲಿನ ಬಿಸ್ಕತ್ತನ್ನು ಕೆಲವೇ ಜನರು ತಿನ್ನುವುದಿಲ್ಲ.

ಶ್ರೀಮತಿ ಪ್ರಮಿಳಾ ನೇಸರ್ಗಿ: ಅಲ್ಸರ್ ಬರಬಾರದೆಂದು ಬಿಸ್ಕತ್ತು ತಿಂದು ಕಾಫಿ ಕುಡಿಯಿರಿ ಎಂದು ಎಲ್ಲಾ ಮನೆಯಲ್ಲಿ ಕೊಡುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಸಾಮಾನ್ಯವಾಗಿ ಎಲ್ಲಾ ಕಡೆಯಲ್ಲೂ ತಿಂಡಿಯನ್ನು ಕೊಡುವುದಕ್ಕಿಂತಲೂ ಅರ್ಜೆಂಟಾಗಿ ಟೀ, ಕಾಫಿ ಜೊತೆಗೆ ಬಿಸ್ಕತ್ತನ್ನು ಕೊಡುತ್ತಾರೆ. ಇಂತಹವುಗಳಿಗೆಲ್ಲ ಅಂದರೆ ಸಣ್ಣಪುಟ್ಟ, ಸಾಮಾನ್ಯ ಜನ, ಹಳ್ಳಿಯ ಜನ, ರೈತರು ಉಪಯೋಗ ಮಾಡತಕ್ಕಂದ್ದಕ್ಕೆ ತೆರಿಗೆಯನ್ನು ಹೆಚ್ಚು ಮಾಡಿದರು. ಕಡಿಮೆ ಯಾವುದಕ್ಕೆ ಮಾಡಿದ್ದಾರೆಂದರೆ

ಫಿಲ್ಟರ್ ಸಿಗರೇಟ್ ಇದನ್ನು ಬಡವರು ಸೇದುವಂಥದ್ದೇ? ಇದಕ್ಕೆ ಇದ್ದಂಥ ತೆರಿಗೆಯನ್ನು ಸಮಾಜವಾದಿ ಎಂದು ಹೇಳಿಕೊಳ್ಳತಕ್ಕಂಥ ಸರ್ಕಾರ ಶೇಕಡ 12 ಇದ್ದುದನ್ನು 10ಕ್ಕೆ ಇಳಿಸಿದ್ದಾರೆ. ತಂಬಾಕು ಪೈಪುಗಳ ಮೇಲೆ 12ಪರ್ಸೆಂಟ್ ಇದ್ದಿದ್ದನ್ನು 10 ಪರ್ಸಂಟ್‌ಗೆ ಇಳಿಸಿದ್ದಾರೆ. ಹಳ್ಳಿಯಲ್ಲಿ ಚಿಲುಮಿಯಲ್ಲಿ ತಂಬಾಕನ್ನು ಹಾಕಿಕೊಂಡು, ನಿಪ್ಪಾಣ ಕಡೆಯಲ್ಲಿ ಇವನ್ನು ಉಪಯೋಗ ಮಾಡುತ್ತಾರೆ. ಅದು ಯಾವುದು ಎಂದರೆ, ಕುಂಬಾರ ಮಾಡತಕ್ಕಂಥ ಚಿಲುಮಿ. ಆದರೆ ಸರ್ಕಾರ ಏನು ಮಾಡಿದೆ ಎಂದರೆ, ತಂಬಾಕು ಪೈಪುಗಳನ್ನು ಬಡವರು ಸೇದುತ್ತಾರೆಂದು ತಿಳಿದುಕೊಂಡು ಇದ್ದಂಥ 12 ಪರ್ಸಂಟ್ ತೆರಿಗೆಯನ್ನು 10ಕ್ಕೆ ಇಳಿಸಿದ್ದಾರೆ. ಫ್ರೆಂಚ್ ಕಾಫಿ, ಇನ್‌ಸ್ಟೆಂಟ್ ಕಾಫಿ, ಇದು ಬಡವರು ಕುಡಿಯುವಂಥದ್ದೇ? ಅಲ್ಲಿ ಬಿಸ್ಕತ್ತು ಇಂತಹವನ್ನೆಲ್ಲ ಶ್ರೀಮಂತಿತು ತಿನ್ನುತ್ತಾರೆ, ಫೆಂಚ್ ಕಾಫಿ, ಇನ್‌ಸ್ಟೆಂಟ್ ಕಾಫಿ ಇದನ್ನೆಲ್ಲ ಬಡವರು ಕುಡಿಯುತ್ತಾರೆ. ಅದಕ್ಕೋಸ್ಕರ ಸರ್ಕಾರ 12 ಪರ್ಸಂಟ್‌ನಿಂದ 10 ಪರ್ಸಂಟ್‌ಗೆ ತೆರಿಗೆ ಇಳಿಸಿದೆ ಎಂದು ಅನಿಸುತ್ತದೆ. ಆ ನಂತರ, ಗಾಜಿನಉಪಕರಣಗಳು, ಅಲ್ಲಿ ಏನೆಂದರೆ ಅಲ್ಯೂಮಿನಿಯಂ ವಸ್ತುಗಳನ್ನು ಶ್ರೀಮಂತರು ಉಪಯೋಗಿಸುತ್ತಾರೆ, ಅದಕ್ಕೋಸ್ಕರವಾಗಿ ತೆರಿಗೆಯನ್ನು ಜಾಸ್ತಿ ಮಾಡಿದ್ದಾರೆ, ಗಾಜಿನ ಉಪಕರಣಗಳನ್ನು ಬಡವರು ಉಪಯೋಗಿಸುತ್ತಾರೆ ಅದಕ್ಕೋಸ್ಕರವಾಗಿ ತೆರಿಗೆಯನ್ನು ಕಡಿಮೆ ಮಾಡಿದ್ದಾರೆ, ಅಲ್ಲವೇ? ವಿದ್ಯುತ್ ಸಲಕರಣೆಗಳು, ಗಂಧದ ಮರಗಳ ಸಾಮಗ್ರಿಗಳು, ಇವುಗಳ ಮೇಲೆ ಇದ್ದ 12 ಪರ್ಸಂಟ್ ತೆರಿಗೆಯಿಂದ 10 ಪರ್ಸಂಟ್‌ಗೆ ಇಳಿಸಿದ್ದಾರೆ. ಸೆಣಬು ಮತ್ತು ಕಾಕಂಬಿಯನ್ನು ಯಾವುದಕ್ಕೋಸ್ಕರ, ಉಪಯೋಗ ಮಾಡುತ್ತಾರೆ? ಮಾನ್ಯ ಕೃಷಿ ಸಚಿವರಿಗೆ ಇದರ ಬಗ್ಗೆ ಬಹಳ ಅನುಭವ ಇದೆ. ನೋಡಿ, ಕಾಕಂಬಿಯಿಂದ ಇನ್ನೂ ರೆಕ್ಟಿಫೈಡ್ ಸ್ಪಿರಿಟ್ ಆಗಿಲ್ಲ, ಅದರಿಂದ ಐ.ಎಂ.ಎಫ್. ಆಗಿಲ್ಲ, ಇನ್ನು ಐ.ಎಂ.ಎಫ್. ಆಗದೇ ಅವರಿಗೆ ನಿದ್ದೆ ಬಂದಿದೆ.

ಅಧ್ಯಕ್ಷರು: ನಿಮಗೆ ಈ ಕಾಕಂಬಿಯಿಂದ ಐ.ಎಂ.ಎಫ್. ತಯಾರು ಮಾಡತಕ್ಕಂಥ ಪ್ರೋಸೆಸ್ ಎಲ್ಲ ಗೊತ್ತಲ್ಲಾ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಕೃಷಿ ಸಚಿವರು ವಿರೋಧ ಪಕ್ಷದಲ್ಲಿದ್ದಾಗ ಕಾಕಂಬಿಯ ಬಗ್ಗೆ ಬಹಳ ದೀರ್ಘವಾಗಿ ಭಾಷಣ ಮಾಡಿದ್ದರು. ಇದು ಸಾಮಾನ್ಯ ಜನರಿಗೆ ಅನುಕೂಲ ಮಾಡುವುದಕ್ಕೆ ತೆರಿಗೆಯನ್ನು ಕಡಿಮೆ ಮಾಡಿದ್ದಾರೆಯೇ? ಆಬಕಾರಿಯವರಿಗೆ ಲಾಭ ಆಗುತ್ತದೆಂದು ತೆರಿಗೆಯನ್ನು 12 ಪರ್ಸಂಟ್‌ನಿಂದ 10ಕ್ಕೆ ಇಳಿಸಿದ್ದಾರೆ. ಇನ್ನು ಸ್ಯಾನಿಟರಿ ವಸ್ತುಗಳು, ಇದನ್ನು ಬಡವರು ಉಪಯೋಗ ಮಾಡುತ್ತಾರೆಯೇ? ಇದಕ್ಕೂ ಕೂಡ 2 ಪರ್ಸಂಟ್ ತೆರಿಗೆ ಕಡಿಮೆ ಮಾಡಿದ್ದಾರೆ. ಸ್ನಾನದ ಸೋಪು ಮೇಲೆ ಇದ್ದಂಥ ತೆರಿಗೆ 12 ರಿಂದ 10 ಪರ್ಸಂಟ್‌ಗೆ ಕಡಿಮೆ ಮಾಡಿದ್ದಾರೆ. ಬಡವರು ಉಪಯೋಗ ಮಾಡತಕ್ಕಂಥ ವಸ್ತುಗಳಿಗೆ ತೆರಿಗೆಯನ್ನು ಜಾಸ್ತಿ ಮಾಡಿದ್ದೀರಿ. ಶ್ರೀಮಂತರು ಉಪಯೋಗಿಸುವ ವಸ್ತುಗಳಿಗೆ ತೆರಿಗೆಯನ್ನು ಕಡಿಮೆ ಮಾಡಿದ್ದೀರಿ.

ಶ್ರೀ ಸಿದ್ದರಾಮಯ್ಯ: ಬಟ್ಟೆ ಒಗೆಯುವಂಥ ಸೋಪುಗಳಲ್ಲಿ ಡಿಟರ್‌ಜೆಂಟ್ ಸೋಪುಗಳಿಗೆ ಮಾತ್ರ ತೆರಿಗೆಯನ್ನು ಜಾಸ್ತಿ ಮಾಡಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಡಿಟರ್ಜೆಂಟ್ ಸೋಪುಗಳನ್ನೂ ಸಹ ಬಟ್ಟೆ ಒಗೆಯುವುದಕ್ಕೆ ಉಪಯೋಗಿಸುವುದಿಲ್ಲವೇ? ನೀವು ತೆರಿಗೆಯನ್ನು ಜಾಸ್ತಿ ಮಾಡಿರುವುದರಲ್ಲಿ ಯಾವುದು ಶ್ರೀಮಂತರು ಉಪಯೋಗಿಸುವ ವಸ್ತುಗಳು, ನೀವು ತೆರಿಗೆಯನ್ನು ಕಡಿಮೆ ಮಾಡಿರುವುದರಲ್ಲಿ ಯಾವುದು ಬಡವರು ಉಪಯೋಗಿಸುವಂಥ ವಸ್ತುಗಳು ಎಂದು ನೀವೇ ನೋಡಿ ಹೇಳಿ. ಶ್ಯಾಂಪೂವನ್ನು ಎಲ್ಲಾ ಶ್ರೀಮಂತರೇ ಉಪಯೋಗಿಸುತ್ತಾರೆ. ಆಲ್ಕೋಹಾಲ್ ಪದಾರ್ಥಗಳು, ಸೂಟ್‌ಕೇಸ್ ಮತ್ತು ಬ್ರೀಫ್‌ಕೇಸುಗಳು ಇವುಗಳು ಬಡವರು ಉಪಯೋಗಿಸುವಂಥ ವಸ್ತುಗಳಾಗಿವೆಯೇ? ಬಡವರು ಟ್ರಂಕ್‌ನ್ನು ಉಪಯೋಗಿಸುವುದಿಲ್ಲ ಎಂದು ತೆರಿಗೆಯನ್ನು ಕಡಿಮೆ ಮಾಡಿದ್ದೀರಾ?

ಅಧ್ಯಕ್ಷರು: ಬ್ರೀಫ್ ಕೇಸ್ ಮತ್ತು ಸೂಟ್‌ಕೇಸ್ ರೇಟ್‌ನ್ನು ಏಕೆ ಕಡಿಮೆ ಮಾಡಿದ್ದಾರೆಂದರೆ, ಚುನಾವಣೆಗಳು ಬರಬಹುದೆಂದು, ಮತ್ತು ಎಲ್ಲಾ ಪಕ್ಷದವರಿಗೂ ಅನುಕೂಲವಾಗಲಿ ಎಂದು ಮಾಡಿದರೆ ಅದಕ್ಕೆ ನೀವು ದೊಡ್ಡ ಅಬ್ಜೆಕ್ಷನ್ ಮಾಡುತ್ತಿದ್ದೀರಾ?

ಶ್ರೀ ಸಿದ್ದರಾಮಯ್ಯ: ಬ್ರೀಫ್ ಕೇಸ್‌ಗೆ ಯಾವ ಕಾಲದಲ್ಲಿ ಮಾನ್ಯತೆ ಬಂತು ಎನ್ನುವುದನ್ನು, ಯಾವ ವರ್ಷದಲ್ಲಿ ಬಂತು ಎನ್ನುವುದನ್ನು ನೋಡಬೇಕಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಬ್ರೀಫ್ ಕೇಸ್‌ಗೆ ಯಾವ ಕಾಲದಲ್ಲಾದರೂ ಮಾನ್ಯತೆ ಸಿಕ್ಕಿರಬಹುದು. ಆದರೆ ಬ್ರೀಫ್ ಕೇಸ್‌ನ ವಿಪರೀತವಾದಂಥ ಉಪಯೋಗವನ್ನು ಯಾವ ಸರ್ಕಾರ ಪಡೆದಿದೆ ಎನ್ನುವುದು ಎಲ್ಲಾ ಜನರಿಗೂ ಗೊತ್ತಾಗಿದೆ. ಸೂಟ್‌ಕೇಸ್ ಮತ್ತು ಅದರಲ್ಲಿದ್ದ 5 ಕೋಟಿ ರೂಪಾಯಿಗಳು ಅಶೋಕ ಹೋಟೆಲ್ ಬಳಿ ಕಳ್ಳತನವಾಯಿತೆಂದು ಪೋಲೀಸ್‌ರಿಗೆ ದೂರು ಹೋಯಿತು. ಆದರೆ ಆ ಸೂಟ್‌ಕೇಸ್ ಸಿಕ್ಕಿಲ್ಲ ಮತ್ತು ಅದರಲ್ಲಿದ್ದ ದುಡ್ಡಿನ ಕಂತೆ ಕೂಡ ಸಿಕ್ಕಿಲ್ಲ. ಯಾವ ಯಾವ ಕಾಲದಲ್ಲಿ ಏನಾಗಿದೆ ಎನ್ನತಕ್ಕಂಥದ್ದು ಜನರಿಗೆ ಗೊತ್ತಿದೆ. ಆದಕ್ಕೆ ಇವತ್ತು ಸ್ವಲ್ಪ ಸಮಾಧಾನವಾಗಿ ಕುಳಿತುಕೊಳ್ಳಿ ಎಂದು ಜನರು ನಿಮ್ಮನ್ನು ಕೂರಿಸಿದ್ದಾರೆ. ಹಳ್ಳಿಗಳಲ್ಲಿ ಸಗಣಿಯನ್ನು ಹಾಕಿ ಸಾರಿಸುವುದಿಲ್ಲವೆಂದು ನೀವು ಮೊಸಾಯಿಕ್ ಟೈಲ್ಸ್‌ಗೆ ಇದ್ದಂಥ 12 ಪರ್ಸಂಟ್ ತೆರಿಗೆಯನ್ನು 10 ಪರ್ಸಂಟ್‌ಗೆ ಕಡಿಮೆ ಮಾಡಿದ್ದೀರಾ?

ಸೆಂಟ್‌ಗೆ ಇದ್ದಂತಹ ತೆರಿಗೆಯನ್ನು ಕಡಿಮೆ ಮಾಡಿದ್ದೀರಿ. ಯಾವ ಕಾರಣಕ್ಕೋಸ್ಕರ ಮಾಡಿದ್ದೀರಿ ಎಂದರೆ ಬಡವರು ಏನೂ ಸ್ನಾನ ಮಾಡುವುದಿಲ್ಲ. ಅವರ ಹತ್ತಿರ ದುರ್ವಾಸನೆ ಇರುತ್ತದೆ, ಅವರು ಕೆಲಸಕ್ಕೆ ಹೋಗುತ್ತಾ ಇರುತ್ತಾರೆ. ಅಂತಹ ದುರ್ವಾಸನೆಯು ಬರಬಾರದೆಂದು ಅವರು ಸೆಂಟ್‌ನ್ನು ಹಚ್ಚಿಕೊಳ್ಳವೆಂದು 12 ಪರ್ಸೆಂಟ್ ಇದ್ದಂತಹ ತೆರಿಗೆಯನ್ನು 10 ಪರ್ಸೆಂಟ್‌ಗೆ ಇಳಿಸಿದ್ದೀರಾ?

ಅಧ್ಯಕ್ಷರು:- ಏನು ಇವತ್ತು ನಿಮ್ಮ ಮಾತಿನ ಶೈಲಿ ಬದಲಾವಣೆಯಾಗಿದೆ, ಏನು ಮುಖ್ಯಮಂತ್ರಿಯವರಿಂದ ಉತ್ತೇಜನ ಪಡೆದುಕೊಂಡ ಹಾಗೆ ಕಾಣುತ್ತಿದ್ದೀರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಆ ರೀತಿ ಏನೂಬದಲಾವಣೆಯಾಗಿಲ್ಲ. ಅವರ ಉತ್ತೇಜನವೂಸಹ ಬೇಡ, ಅವರ ಸ್ಟೈಲೂ ಕೂಡ ಬೇಕಾಗಿಲ್ಲ. ಅದಕ್ಕಾಗಿ ನಾನು ಇಲ್ಲಿ ಅನೇಕ ಸಾರಿ ಏನು ಹೇಳಿದ್ದೇನೆಂದರೆ, ನಮ್ಮ ಹಳ್ಳಿಯ ಕಡೆ ಗಾದೆ ಏನು ಹೇಳುತ್ತಾರೆಂದರೆ

ಹೇತಾಗ ಹೆಂಡತಿಯ ಗುಣವನ್ನು ನೋಡಬೇಕು, ಸೋತಾಗ ಸವತಿ ಗುಣ ನೋಡಬೇಕು. ಅಧಿಕಾರ ದಲ್ಲಿದ್ದಾಗ ಜೆ.ಹೆಚ್. ಪಟೇಲರ ಗುಣ ನೋಡಬೇಕೆಂದು, ಅಧಿಕಾರ ಸಿಕ್ಕಿದ ಮೇಲೆ ಇವರು ನಿಜವಾಗಿ ಸಮಾಜವಾದಿನೋ ಏನೋ ಇಲ್ಲವೋ ಎನ್ನುವುದು ಈ ಬಜೆಟ್‌ನಿಂದ, ಇವರ ಕೃತಿಗಳಿಂದ, ಇವರ ಆಡಳಿತದಿಂದ ಜನರಿಗೆ ಗೊತ್ತಾಗುತ್ತದೆ. ಆದಕ್ಕೋಸ್ಕರವಾಗಿ ಇಂತಹವರಿಂದ ಇನ್ವಿರೇಷನ್ ಪಡೆಯಬೇಕಾಗಿಲ್ಲ. ಆದರೆ ಏನೋ 10-20 ವರ್ಷದ ಹಿಂದೆ ಆವರಿಂದ ಕಲಿಯಬೇಕಾದಂತದ್ದು ಇತ್ತು.

ಶ್ರೀ ಸಿದ್ದರಾಮಯ್ಯ (ಹಣಕಾಸಿನ ಸಚಿವರು):- ಮಾನ್ಯ ಖರ್ಗೆ ಯವರೇ, ನೀವು ನೋಡತಕ್ಕಂತಹ ದೃಷ್ಟಿಕೋನ ಸರಿಯಾಗಿದ್ದರೆ ನಿಮಗೆ ಚೆನ್ನಾಗಿಯೇ ಕಾಣಿಸುತ್ತದೆ. ಆದರೆ ಈಗ ನಿಮ್ಮ ದೃಷ್ಟಿಕೋನ ಸರಿಯಾಗಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ನಾನಂತೂ ನಿಮ್ಮ ಮುಂದೆ ಇರತಕ್ಕಂತಹ ನಿಜಾಂಶವನ್ನು ಇಟ್ಟಿದ್ದೇನೆ. ಮತ್ತು ಮಾನ್ಯ ಸಿದ್ದರಾಮಯ್ಯನವರು ಯಾವ ಯಾವುದರ ಮೇಲೆ ಕಡಿಮೆ ಮಾಡಿದ್ದಾರೆ ಅದು ಅವರು ಕೊಟ್ಟಂತಹ ಬಜೆಟ್ ಪುಸ್ತಕದಲ್ಲಿ ಇರುವುದನ್ನೇ ಹೇಳುತ್ತಿದ್ದೇನೆ. ಅವರು ಮಾಡಿರುವುದೆಲ್ಲ ಬಡವರ ಪರವಾಗಿಯೇ ಇದೆಯೆಂದರೆ ನನ್ನದೇನೂ ಅಭ್ಯಂತರವಿಲ್ಲ. ಅವರ ದೃಷ್ಟಿಯೇ ಈ ರೀತಿಯಾಗಿ ಇದೆಯೆಂದು ನಾನು ತಿಳಿದುಕೊಳ್ಳುತ್ತೇನೆ. ವಿಶೇಷವಾಗಿ ಹೇಳುವುದಾದರೆ ಸರ್ಕಾರದವರು ಗ್ರಾನೈಟ್ ಯಾವುದೇ ಲಾಬಿಗೆ ಮಣಿಯುವುದಿಲ್ಲ ಎಂದು ಬಹಳವಾಗಿ ಹೇಳಿದರು. ಹಾಗೆಯೇ ಅಬ್ಕಾರಿಯ ಯಾವುದೇ ಲಾಬಿಗೆ ಮಣಿಯುವುದಿಲ್ಲ ಯಾರು ಮಣಿಯುತ್ತಾರೆಂದು ಹೇಳುತ್ತಾರೆ ಅವರು ಬರಲಿ, ಅವರನ್ನು ಕರೆದು ಚಿಂದಿ ಮಾಡುತ್ತೇವೆ, ಕಡಿದು ಹಾಕುತ್ತೇವೆ ಎಂದು ಏನೇನೋ ಹೇಳಿದರು. ಆದರೆ ಈಗ ಮಂಡಿಸಿರತಕ್ಕಂತಹ ಆಯವ್ಯಯದಲ್ಲಿ ಇವರು ಮಾಡಿರುವಂತಹದ್ದು ಏನೆಂದರೆ... ಮಾನ್ಯ ಅಧ್ಯಕ್ಷರೆ, ತಾವು ಈಗ ಹೊರಟು ಹೋಗುತ್ತಿದ್ದೀರಿ, ತಾವು ಇಲ್ಲಿಯೇ ಇದ್ದು ಕೇಳಿದರೆ ಚೆನ್ನಾಗಿತ್ತು.

ಅಧ್ಯಕ್ಷರು:- 10 ನಿಮಿಷದಲ್ಲಿ ಮತ್ತೆ ಬರುತ್ತೇನೆ.

(ಈ ಹಂತದಲ್ಲಿ ಅಧ್ಯಕ್ಷ ಪೀಠವನ್ನು ಮಾನ್ಯ ಉಪಾಧ್ಯಕ್ಷರು)

(ಶ್ರೀ ಚಂದ್ರಶೇಖರ ಎಂ. ಮಾಮನಿಯವರು) ಅಲಂಕರಿಸಿದರು)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಏನು ಸೆಂಟ್ ಹಾಕಿಕೊಳ್ಳುವುದಕ್ಕೆ ಹೋಗುತ್ತಿದ್ದೀರಾ? ಗ್ರಾನೈಟ್, ಟೈಲ್ಸ್ ಇವುಗಳಿಗೆ ಇದ್ದಂತಹ 12 ಪರ್ಸೆಂಟ್ ತೆರಿಗೆಯನ್ನು 10 ಪರ್ಸೆಂಟ್‌ಗೆ ಇಳಿಸಿದ್ದೀರಿ. ಇದನ್ನು ನೋಡಿದರೆ ಎಕ್ಕೆಸ್ ಲಾಬಿ, ಗ್ರಾನೇಟ್ ಲಾಬಿಗೆ ಮಣಿದಿದ್ದೀರಿ ಎಂದು ಹೇಳಿದರೆ ಏನು ತಪ್ಪಾಗುತ್ತದೆ? ಮಣಿದಿದ್ದೀರಿ ಎಂದು ಹೇಳುವುದಕ್ಕೆ ನಿಮ್ಮ ಕೈತಿಯಲ್ಲಿ ತೋರಿಸುತ್ತಾ ಇದ್ದೀರಿ ಟ್ಯಾಕ್ಸ್‌ನ್ನು ಅಷ್ಟೇ ಇಡಬೇಕಾಗಿತ್ತು. ಅದರಲ್ಲಿಯೂ ರ್ಯಾಷನಲ್ ಹೆಸರಿನಲ್ಲಿ ಯೂರಿಗೆ ನೀವು ಸಹಾಯವನ್ನು ಮಾಡಬೇಕಾಗಿತ್ತೋ ಅದನ್ನು ಬಿಟ್ಟು ಈ ಇರ್-ರ್ಯಾಷನಲ್ ಜನರಿಗೆ ಸಹಾಯ ಮಾಡುವುದಕ್ಕೋಸ್ಕರ ರ್ಯಾಷನಲ್ ಥಿಯರಿ ಏನು ಹೇಳುತ್ತೀರಿ,? ರ್ಯಾಷನಲ್‌ನಿಂದ ಕಡಿಮೆ ಮಾಡಿದ್ದೇವೆಯೇ ಹೊರತಾಗಿ ವಿಶೇಷವಾದಂಥ ರಿಯಾಯಿತಿ ಕೊಟ್ಟಿಲ್ಲವೆಂದು ಹೇಳುತ್ತೀರಾ? ರಾಜ್ಯಕ್ಕೆ ಹೆಚ್ಚಿಗೆ ತೆರಿಗೆ ರೂಪದಲ್ಲಿ ಹಣ ಬರುತ್ತಿತ್ತು

ಎಂದರೆ, ಅದನ್ನು ನೀವು ಏಕೆ ಕಡಿಮೆ ಮಾಡುವುದಕ್ಕೆ ಹೋಗತ್ತೀರಿ? ಬೇಕಾದರೆ 2 ತರಹ ಅಥವಾ 3 ತರಹದ ತೆರಿಗೆ ಪದ್ಧತಿ ಇರಲಿ. 8 ಪರ್ಸಂಟ್, 10 ಪರ್ಸಂಟ್, 12 ಪರ್ಸಂಟ್ ಹೀಗೆ ತೆರಿಗೆ ಇರಲಿ. ಏಕೆಂದರೆ ಹಣವನ್ನು ಸಂಗ್ರಹಣೆ ಮಾಡುವಾಗ, ಒಂದು ಕಡೆ ಸರ್ಕಾರದಲ್ಲಿ ಇಲ್ಲ ಎಂದು ಹೇಳುತ್ತೀರಿ, ಸಂಪನ್ಮೂಲ ಸಂಗ್ರಹಣೆ ಮಾಡುವುದಕ್ಕೆ ಆಗುವುದಿಲ್ಲವೆಂದು ಹೇಳುತ್ತೀರಿ, ಸಂಪನ್ಮೂಲ ಸಂಗ್ರಹಣೆ ಮಾಡುವುದಕ್ಕೆ ಆಗುವುದಿಲ್ಲವೆಂದು ಹೇಳುತ್ತೀರಿ. ಇನ್ನೊಂದು ಕಡೆ ಸಂಗ್ರಹಣೆ ಮಾಡುವುದನ್ನು ಬಿಟ್ಟು ಆವರಿಗೆ ರಿಯಾಯಿತಿಯನ್ನು ಕೊಟ್ಟು, ತೆರಿಗೆಯನ್ನು ಬಡವರ ಮೇಲೆ ಜಾಸ್ತಿ ಮಾಡಿದ್ದೀರಿ. ಈಗಾಗಲೇ ಜನ ಸರ್ಕಾರದ ಮೇಲೆ ಬೇಸರಪಟ್ಟಿಕೊಂಡಿದ್ದಾರೆ. ಅಂತಹ ಜನರ ಮೇಲೆ ಟ್ಯಾಕ್ಸ್ ಮೇಲೆ ಟ್ಯಾಕ್ಸ್ ಏರುವಂತಹ ಪ್ರಯತ್ನ ಮಾಡುತ್ತಿದ್ದಾರೆ. ಒಂದು ಕಡೆ ಇದ್ದಂತಹ ತೆರಿಗೆಯನ್ನು ಕಡಿಮೆ ಮಾಡಿದ್ದೀರಿ, ಇನ್ನೊಂದು ಕಡೆ ಹೊಸ ತೆರಿಗೆಯನ್ನು ಹಾಕಿ 5 ಪರ್ಸೆಂಟ್ ಹೆಚ್ಚು ಮಾಡಿದ್ದೀರಿ. ಇಡೀ ಕರ್ನಾಟಕ ರಾಜ್ಯದಲ್ಲಿ ಮೂಲಭೂತ ಸೌಲಭ್ಯವನ್ನು ಕೊಡುವುದಕ್ಕೆ ನಾವು ಮಾಡುತ್ತೇವೆಂದು, ಅದು ಒಂದಾಯಿತು. ಜನರು ಎಷ್ಟೊಂದು ಸಹಿಸಿಕೊಳ್ಳಬೇಕು? ಈ ರೀತಿಯಾಗಿ ಕೆಲಸವನ್ನು ಮಾಡುತ್ತಿದ್ದೀರಿ. ಒಂದು ಕಡೆ ಡೆವಲಪ್‌ಮೆಂಟ್, ನಿಮ್ಮ ಡೆವಲಪ್‌ಮೆಂಟ್ ಏನಾಗಿದೆ? ಡೆವಲಪ್‌ಮೆಂಟ್ ಮಾಡುತ್ತೇವೆಂದು ಹೇಳಿ, ಆದರ ವಿಚಾರವನ್ನು ಹೇಳಬೇಕೆಂದರೆ ನಿಮ್ಮ ಡೆವಲಪ್‌ಮೆಂಟ್‌ನಲ್ಲಿಯೂ ಕೂಡ ನೀವು ಮಾಡಿದ್ದು ಏನು? ಹೋದಸಲ ಪ್ಲಾನ್‌ನಲ್ಲಿ ಇರತಕ್ಕಂಥದ್ದೇ 4,545 ಕೋಟಿ ರೂಪಾಯಿಗಳು ಆದರೆ ಅದನ್ನು ಇಂಪ್ಲಿಮೆಂಟ್ ಮಾಡಿದ್ದೂ ಎಷ್ಟು? ಈಗಾಗಲೇ ತಾವು ಹೇಳಿರುವಂತೆ ಸುಮಾರು 4,326 ಕೋಟಿ ರೂಪಾಯಿಗಳು. ಅಂದರೆ ಎಷ್ಟು ಕಡಿಮೆಯಾಯಿತೆಂದರೆ 196 ಕೋಟಿ ರೂಪಾಯಿಗಳು. ಇದಲ್ಲದೆ ಆಪ್ಪರ್ ಕೃಷ್ಣ ಪ್ರಾಜೆಕ್ಟ್‌ಕ್ಕೆ ಜಲ ಭಾಗ್ಯ ನಿಗಮದಲ್ಲಿ 800 ಕೋಟಿ ರೂಪಾಯಿಗಳನ್ನು ಸಂಗ್ರಹಣೆ ಮಾಡುತ್ತೆವೆಂದು ಹೇಳಿದ್ದಿರಿ. ಆದರೆ ಈಗ ನಮಗೆ ಒದಗಿಸಿರುವಂತಹ ಮಾಹಿತಿಯ ಪ್ರಕಾರವೇ 400 ಕೋಟಿ ರೂಪಾಯಿಗಳನ್ನು ಸಂಗ್ರಹಣೆ ಮಾಡುತ್ತೇವೆ.

ಶ್ರೀ ಸಿದ್ದರಾಮಯ್ಯ:- ಮಾನ್ಯ ಅಧ್ಯಕ್ಷರೆ, ಮಾರ್ಚ್ ತಿಂಗಳಿನಲ್ಲಿ 400 ಕೋಟಿ ರೂಪಾಯಿಗಳನ್ನು ಸಂಗ್ರಹಣೆ ಮಾಡುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೆ, ಮಾನ್ಯ ಆರ್ಥ ಸಚಿವರು ವಿಧಾನ ಪರಿಷತ್ತಿನಲ್ಲಿ ತಮ್ಮ ಭಾಷಣದಲ್ಲಿ ವಾಣಿಜ್ಯ ಇಲಾಖೆಯಲ್ಲಿ 400 ಕೋಟಿ ರೂಪಾಯಿಗಳು ಕಡಿಮೆಯಾಗುವುದು ಹಾಗೂ ಅಬಕಾರಿ ಇಲಾಖೆಯಿಂದ ಸುಮಾರು 100 ಕೋಟಿ ರೂಪಾಯಿಗಳು ಕಡಿಮೆಯಾಗುತ್ತದೆಂದು ಹೇಳಿದ್ದೀರಿ.

ಶ್ರೀ ಸಿದ್ದರಾಮಯ್ಯ:- ಮಾನ್ಯ ಅಧ್ಯಕ್ಷರೆ, ನಾನು ಆ ರೀತಿಯಾಗಿ ಹೇಳಿಲ್ಲ. ವಾಣಿಜ್ಯ ತೆರಿಗೆಯಲ್ಲಿ 300 ಕೋಟಿ ರೂಪಾಯಿಗಳು ಹಾಗೂ ಎಕ್ಸೈಜ್‌ನಲ್ಲಿ 70-80 ಕೋಟಿ ರೂಪಾಯಿಗಳು ಕಡಿಮೆಯಾಗುತ್ತದೆಂದು ಹೇಳಿರುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಅಂದರೆ ಒಟ್ಟು 500 ಕೋಟಿ ರೂಪಾಯಿಗಳಾಯಿತು ಸಂಗ್ರಹಣೆಯಲ್ಲಿ 400 ಕೋಟಿ ರೂಪಾಯಿಗಳು ಕಡಿಮೆಯಾಗಿರುವುದು;

ಆದರೆ ಮಾರ್ಚ್ ತಿಂಗಳಿನಲ್ಲಿ ಗುರಿಯನ್ನು ಮುಟ್ಟುತ್ತೇವೆಂದು ಹೇಳುತ್ತೀರಿ ಇದನ್ನ ಸಹ ಲೆಕ್ಕಕ್ಕೆ ತೆಗೆದುಕೊಂಡರೆ 900 ಕೋಟಿ ರೂಪಾಯಿಗಳು, ಇದಲ್ಲದೆ ಕೇಂದ್ರ ಸರ್ಕಾರದಿಂದ ವಿಡಿಐಎಸ್ ನಲ್ಲಿ ಸ್ವಲ್ಪ ನಮ್ಮ ಶೇರ್ ಬರಬಹುದೆಂದು ತಾವು ಹೇಳಿದ್ದೀರಿ ಇದೆಲ್ಲವನ್ನೂ ಲೆಕ್ಕ ತೆಗೆದುಕೊಂಡರೆ, ಊಹೆಯ ಮೇಲೆ ಸುಮಾರು 1000 ಕೋಟಿ ರೂಪಾಯಿಗಳ ಮೇಲೆ ನಮಗೆ ಏನು ಡೆವಲಪ್‌ಮೆಂಟ್ ವರ್ಕ್ ಆಗಬೇಕಾಗಿತ್ತು ಆ ಹಣ ನಿಮಗೆ ಸಿಗಲಿಲ್ಲ. 1000 ಕೋಟಿ ರೂಪಾಯಿಗಳ ಅಭಿವೃದ್ಧಿ ಕೆಲಸ ನಿಂತರೆ, ನಾವು ಆನೇಕ ಸಾರಿ ಅಭಿವೃದ್ಧಿ ಕೆಲಸಗಳು ನಿಂತಿದೆ ಎಂದರ್ರೆ ಎಲ್ಲಿ ನಿಂತಿದೆ ಎಂದು ಹೇಳುತ್ತೀರಿ. ನಿಮ್ಮ ಅಪೇಕ್ಷಯ ಪ್ರಕಾರ ಇವತ್ತು ಸೇಲ್ಸ್ ಟ್ಯಾಕ್ಸ್ ಕಲೆಕ್ಟ ಆಗಿಲ್ಲ. ಆದರಲ್ಲಿ ಖೋತವಾಗಿದೆ. ಎಕ್ಸೈಜ್‌ನಲ್ಲಿ ಖೋತವಾಗಿದೆಂದು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ನಿಮ್ಮ ವೆಲ್‌ಫೇರ್ ಮೆಷರ್ಸ್ ಏನಾಯಿತು? ನಿಮ್ಮ ಡೆವಲಪ್‌ಮೆಂಟಲ್ ಫೇಸ್ ಏನಿತ್ತು ಆ ಡೆವಲಪ್‌ಮೆಂಟಲ್ ಫೀಸೆನ್ನು, ನಿಮ್ಮ ಗುರಿಯನ್ನು ಹೇಗೆ ಮುಟ್ಟುವುದಕ್ಕೆ ಹೇಗೆ ಸಾಧ್ಯವಾಗುತ್ತದೆ. ಹಣ ಇಲ್ಲದೇ ನಿಮ್ಮ ಗುರಿಯನ್ನು ಹೇಗೆ ಸಾಧನೆ ಮಾಡುತ್ತೀರಿ? ನೀವು ಏನು ಜಾದುನಾ ಅಥವಾ ಮಾಯಮಂತ್ರ ಮಾಡುವುದಕ್ಕೆ ಆಗುತ್ತದಾ? ನಮ್ಮ ಮುಖ್ಯ ಮಂತ್ರಿಗಳಾದ ಜೆ.ಹೆಚ್. ಪಟೇಲ್‌ರು ಶಂಕರಚಾರ್ಯರ ಕಥೆಯನ್ನು ಹೇಳುತ್ತಿದ್ದರು. ಆದಕ್ಕೆ ನಾನು ಅವರಿಗೆ ಈಗ ಹೇಳಬೇಕಾಗುತ್ತದೆ ಬರೀ ಹರಕೆಯನ್ನು ಮಾಡಿದರೆ ಮಕ್ಕಳು ಹುಟ್ಟುತ್ತವೆ ಏನು? ಏನು ನೀವು ಬಜೆಟ್ ಪುಸ್ತಕದಲ್ಲಿ ಪ್ರಿಂಟ್ ಮಾಡಿದರೆ ಎಲ್ಲಾ ಡೆವಲಪ್‌ಮೆಂಟ್ ಕೆಲಸಗಳಾಗುತ್ತವೆಯೇ?

ಶ್ರೀ ಎಸ್.ಎಸ್. ಪಾಟೀಲ್:- ಅವರು ಹೇಳುತ್ತಿದ್ದಾರೆ ಲಗ್ನವಾಗದೇ ಸಹ ಮಕ್ಕಳಾಗುತ್ತವೆಂದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಸಂತ ಸುಖರಾಮರವರು ಒಂದು ಮಾತನ್ನು ಹೇಳುತ್ತಿದ್ದರು ನವಸೆ ಪುತ್ರ ಕನ್ಯಾ....

ಶ್ರೀ ಹೆಚ್.ಡಿ. ಬಸವರಾಜು:- ಈಗ ಜನತಾ ದಳದ ಶಾಸಕರಿಗೆ ದೇವರ ಮೇಲೆ ನಂಬಿಕೆ ಬಂದು ಬಿಟ್ಟಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ನೀವು ಪ್ರಾರಂಭ ಮಾಡದೆ, ಹಣವನ್ನು ಸಂಗ್ರಹಣೆ ಮಾಡದೆ ಇವತ್ತಿನ ದಿನ ನಿಮ್ಮ ಫಿಜಿಕಲ್ ಟಾರ್ಗೆಟ್ ಎಲ್ಲಾ ಅಚೀಪ ಮಾಡುತ್ತೇವೆಂದು ಹೇಳಿಕೊಂಡಿದ್ದೀರಿ, ಇದು ಹೇಗೆ ಸಾಧ್ಯ, ಇದು ಎನು ಜಾದು?

ಇವತ್ತು ಆದರಲ್ಲಿ ಒಂದು ಸಾವಿರ ಕೋಟಿ ರೂಪಾಯಿ ಕೆಲಸ ಹಿಂದೆ ಬಿದ್ದಿದೆ ಅಂದರೆ ಇದು ಆಶ್ಚರ್ಯವೇನಿಲ್ಲ. ನೀವು ಕೊಟ್ಟ ಅಂಕಿಸಂಖ್ಯೆಗಳು, ನೀವು ಇಲ್ಲಿ ಪ್ರಸ್ತಾಪ ಮಾಡಿದಂತ ಮಾತುಗಳು ಇದರಿಂದ ಇದು ಸ್ಪಷ್ಟವಾಗುತ್ತವೆ. ಆದರೆ ಇವತ್ತು ಇಷ್ಟೊಂದು ಇದ್ದರೂ ಕೂಡ ನೀವು ಯಾವುದೇ ಒಂದು ರೀತಿಯಿಂದ ಸಮರ್ಥನೆ ಮಾಡಿಕೊಳ್ಳತಕ್ಕ ಪ್ರಯತ್ನ ಮಾಡುತ್ತಿದ್ದೀರಿ. ಇದು ಸರಿಯಲ್ಲ. ಇದಕ್ಕೆಲ್ಲ ಸ್ಪಷ್ಟೀಕರಣ ಕೂಡಬೇಕಾಗುತ್ತದೆ. ಅಂದರೆ ನೀವು ಯಾವರೀತಿ ಹಣ ಸಂಗ್ರಹಣೆ ಮಾಡುವುದಕ್ಕೆ ಪ್ರಯತ್ನ ಮಾಡಿದಿರಿ ಅದರಲ್ಲೆಲ್ಲ ವಿಫಲರಾದಿರಿ. ನೀವು ಯಾವ ಕಾರಣಕ್ಕಾಗಿ ವಿಫಲರಾದಿರಿ ಎಂಬುದನ್ನು ಹೇಳಬೇಕಾಗುತ್ತದೆ. ಇಲ್ಲದಿದ್ದರೆ

ಪ್ಲಾನ್ ಔಟ್‌ಲೇಯಲ್ಲಿ ಆದಷ್ಟು ಪ್ರಯತ್ನ ಮಾಡಿ ಮಾಡಿದ್ದೇವೆಂದು ಹೇಳುತ್ತಿದ್ದಿರಿ. ನಾನು ನಿಮಗೆ ಅಂಕಿ ಸಂಖ್ಯೆ ಕೂಡುತ್ತೇನೆ, ಹಿಂದೆ ಹತ್ತು ವರ್ಷಗಳಿಂದ ಯಾವ ರೀತಿಯಾಗಿ ಪ್ಲಾನ್‌ನಲ್ಲಿ ಅಥವಾ ಬಜೆಟ್‌ನಲ್ಲಿ ಇಖಿಚ್ಚು ಹಣ ಕಡಿಮೆಯಾಗುತ್ತಾ ಬಂದಿದೆ, ಮತ್ತು ಇವರ ಕಾಲದಲ್ಲಿ ಎಷ್ಟು ಹೆಚ್ಚಿನ ಹಣವನ್ನು ಮಾಡಿದ್ದಾರೆಂಬುದನ್ನು ನಾನು ಹೇಳುತ್ತೇನೆ. ಆದಕ್ಕೆ ಸಂಬಂಧಪಟ್ಟ ಅಂಕೀಅಂಶಗಳನ್ನು ಆಮೇಲೆ ಕೊಡುತ್ತೇನೆ. ನಾನು ಏತಕ್ಕೆ ಇದನ್ನು ಹೇಳುತ್ತಿದ್ದೇನೆಂದರೆ, ಇದು ಹತ್ತಾರು ವರ್ಷಗಳಿಂದ ಯಾವ ಸರ್ಕಾರ ಕೂಡ ಕೋಟ್ಯಾಂತರ ರೂಪಾಯಿ ಡಿಫಿಸಿಟ್ ತೋರಿಸುತ್ತಿದ್ದಾರೆ. ಆದು ಸುಮಾರು 196 ಕೋಟಿರೂಪಾಯಿ ಎಂದು ಹೇಳಿದರು; ಬಹುಶಃ ಆದು 250-300 ಕೋಟಿ ರೂಪಾಯಿ ಮೇಲೆ ಹೋಗುತ್ತದೆ. ಹೋದಸಾರಿ 96 ಕೋಟಿ ಎಂದು ಹೇಳಿದ್ದಿರಿ, ಈ ಸಾರಿ 196 ಕೋಟಿ ರೂಪಾಯಿ ಆಯಿತು. ಆದನ್ನು ಕಡಿಮೆ ಮಾಡುವುದಕ್ಕೆ ಆಗಲಿಲ್ಲ. ನಿಮ್ಮ ಪ್ಲಾನ್ ಔಟ್‌ಲೇ ಕಡಿಮೆ ಮಾಡಿಕೊಂಡು, ಇಲ್ಲ ನಿಮ್ಮ ಎಕ್ಸ್‌ಪೆಂಡಿಚರ್ ಕಡಿಮೆ ಮಾಡಿಕೊಂಡು ಮಾಡಬೇಕು. ಇದೇ ಗುರಿಯನ್ನು ಇಟ್ಟುಕೊಂಡರೆ ನಿಮಗೆ ಸಾಧನೆ ಮಾಡುವುದಕ್ಕಾಗುವುದಿಲ್ಲ. ವಿಶೇಷವಾಗಿ ನಾನು ತಮ್ಮ ಗಮನಕ್ಕೆ ತರುತ್ತೇನೆ. ನೀವು ಹೇಗೆ ಪ್ರತಿಯೊಂದು ಸೆಕ್ಟಾರ್‌ನಲ್ಲಿ ಕಡಿಮೆ ಮಾಡಿಕೊಂಡು ಬಂದಿದ್ದೀರಿ ಎಂಬುದನ್ನು ತಮ್ಮ ಅವಗಾಹನೆಗೆ ತರುತ್ತೇನೆ. ಕೃಷ್ಣಿ ಮತ್ತು ಆದಕ್ಕೆ ಸಂಬಂಧಪಟ್ಟದ್ದಕ್ಕೆ 1989-90ರಲ್ಲಿ ಒಟ್ಟು ಅಲೋಕೇಷನ್‌ನಲ್ಲಿ 7.63 ಪರ್ಸೆಂಟ್ ಇತ್ತು; 90-91ರಲ್ಲಿ 8.52 ಪರ್ಸೆಂಟ್, 91-92ರಲ್ಲಿ 10.26 ಪರ್ಸೆಂಟ್, 92-93ರಲ್ಲಿ 8.36 ಪರ್ಸೆಂಟ್, 93-93ರಲ್ಲಿ 7.04 ಪರ್ಸೆಂಟ್ ಇತ್ತು. ಆದರೆ ಇವರು ಮಾಡಿದ್ದು ನೋಡಿ, 96-97ರಲ್ಲಿ 5.77 ಪರ್ಸೆಂಟ್, 97-98ರಲ್ಲಿ 5.03 ಪರ್ಸೆಂಟ್ 98-99ಕ್ಕೆ 5.1 ಪರ್ಸೆಂಟ್ ಅಂದರೆ ಹೋದ ವಷಕ್ಕಿಂತ ಈ ವರ್ಷ ಅಲೋಕೇಷನ್ ಇನ್ನೂ ಕಡಿಮೆ. ಯಾವುದಕ್ಕೆ ಅಂದರೆ ವ್ಯವಸಾಯ ಮತ್ತು ರೈತರ ಬಗ್ಗೆ ಮಾಡಿರತಕ್ಕದ್ದು. ತಮಗೆ ಮಾನ್ಯ ಬೈರೇಗೌಡರಿಗೆ ಸಿಗತಕ್ಕ ಹಣ 5.1 ಪರ್ಸೆಂಟ್. ಗ್ರಾಮೀಣಾಭಿವೃದ್ಧಿಯ ಬಗ್ಗೆ ಇಷ್ಟೊಂದು ಹೇಳುತ್ತೀರಲ್ಲ ಹಳ್ಳಿ ಅಭಿವೃದ್ಧಿಗೆ ಎಷ್ಟು ಹಣ ಒದಗಿಸಿದ್ದೀರಿ? 1989-90ರಲ್ಲಿ 5.55 ಪರ್ಸೆಂಟ್, 91-92ರಲ್ಲಿ 7.35 ಪರ್ಸೆಂಟ್ ಕೊಟ್ಟರೆ, ಇವರ ಕಾಲದಲ್ಲಿ ಕೇವಲ 4.73 ಪರ್ಸೆಂಟ್. ಇದು ಈಗ ನೀವು ಅಲೋಕೇಟ್ ಮಾಡಿರತಕ್ಕದು. ಈ ಪುಸ್ತಕದಲ್ಲಿ ತಾವು ಹೇಳಿರ ತಕ್ಕದು. ನೋಡಿದರೆ 4.73 ಪರ್ಸೆಂಟ್. ಇದು ಆದ್ಯತೆ ಕೊಟ್ಟದ್ದು ಗ್ರಾಮೀಣಾಭಿವೃದ್ಧಿಗೆ. ಏಕೆಂದರೆ ಎಲ್ಲ ಮುಖಂಡರುಗಳು ಹಳ್ಳಿಯಿಂದ ಬಂದಂಥವರು. ಹಳ್ಳಿಯಿಂದ ಬಂದಂಥವರು ಹಿಂದಿನವರು ಕೊಟ್ಟದ್ದು 91-92ರಲ್ಲಿ 7.35 ಪರ್ಸೆಂಟ್ ಆದರೆ ಇವರು ಈ ತಮ್ಮ ಬಜೆಟ್‌ನಲ್ಲಿ ಅಲೋಕೇಟ್ ಮಾಡಿರತಕ್ಕದ್ದು 4.73 ಪರ್ಸೆಂಟ್. ವಿಶೇಷವಾಗಿ ಗ್ರಾಮೀಣ ಪ್ರದೇಶದ ಯೋಜನೆಗಳಿಗೆ 60-70 ಕೋಟಿ ಇದ್ದದ್ದು ಕಡಿಮೆಯಾಗಿ ಇವತ್ತಿನ ದಿವಸ ಇವರಿಗೆ ಕೊಡುವುದಕ್ಕೆ ಸಾಧ್ಯವಾಗಿಲ್ಲ ಮತ್ತು ಕೊಡತಕ್ಕ ಪ್ರಯತ್ನವನ್ನು ಮಾಡಿಲ್ಲ. ಇನ್ನು ಪವರ್ ಬಗ್ಗೆ ಹೇಳುವುದಾರೆ, ಹೆಚ್ಚಾಗಿ ನಮ್ಮ ಶಕ್ತಿ ಖರ್ಚು ಮಾಡತಕ್ಕದ್ದು ಎಲೆಕ್ಟ್ರಿಸಿಟಿ ಉತ್ಪಾದನೆಗೆ, ಆಮೇಲೆ ಪವರ್ ಜನರೇಷನ್‌ಗೆ ನಾವು ಹೆಚ್ಚಿನ ಆಸಕ್ತಿ ವಹಿಸಿದ್ದೇವೆ; ಮತ್ತು ಆದಕ್ಕೆ ಸಾಕಷ್ಟು ಹಣವನ್ನು ಕೊಟ್ಟುಕೊಂಡು ಬಂದಿದ್ದೇವೆಂದು ಹೇಳಿದ್ದಾರೆ. 1989-90ರಲ್ಲಿ 24.04 ಪರ್ಸೆಂಟ್, ಆದರೆ ಈಗ ತಾವು ಕೊಟ್ಟದ್ದು 16.25 ಪರ್ಸೆಂಟ್ ಅಲೋಕೇಷನ್. ಇದು ಪವರ್ ಜನರೇಷನ್‌ಗೆ ಕೊಟ್ಟ ಆದ್ಯತೆ. ಇವರು ಹಿಂದಿನ ಅಂಕಿಅಂಶಗಳನ್ನು ತೆಗೆದುಕೊಂಡು ಹೇಳುತ್ತಾರೆ. ಆವರ ಇಕನಾಮಿಕ್ ಸರ್ವೆ ಪುಸ್ತಕದಲ್ಲಿ

ಅವರು ಪ್ರಿಂಟ್ ಮಾಡಿದ್ದನ್ನು ನಾನು ಹೇಳುತ್ತಿದ್ದೇನೆ. ಇವತ್ತು ನೀವು ಯಾರ ಸರ್ಕಾರವನ್ನೇ ತೆಗೆದುಕೊಳ್ಳಿ, ಕೃಷಿ, ಗ್ರಾಮೀಣಾಭಿವೃದ್ಧಿ, ಪವರ್ ಜನರೇಷನ್ ಮತ್ತು ಕೈಗಾರಿಕೆಗಳು. ಕೈಗಾರಿಕೆಗಳಿಗೆ ಹಿಂದೆ 1989-90ರಲ್ಲಿ 8 ಪರ್ಸೆಂಟ್ ಕೊಟ್ಟಿದ್ದರೆ, ಈಗ ಇವರು ಕೊಟ್ಟಿರತಕ್ಕದ್ದು 2.74 ಪರ್ಸೆಂಟ್. ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ನಿಮ್ಮ ಅಡಳಿತದಲ್ಲಿ 1995-96, 96-97, 97-98 ಮತ್ತು 98-99ರಲ್ಲಿ ಏನು ಅಲೋಕೇಷನ್ ಇದೆ ಅದನ್ನು ನಿಮ್ಮ 4ನೇ ಆಯವ್ಯಯದಲ್ಲಿ ನೀವೇ ಕ್ರಮೇಣವಾಗಿ ಕಡಿಮೆ ಮಾಡಿಕೊಂಡು ಬಂದಿದ್ದೀರಿ. ಹಣ ಹೆಚ್ಚಿಗೆ ಕೊಡುವುದು ಬಿಟ್ಟು, ಹಣ ಹೆಚ್ಚಿಗೆ ಸಂಗ್ರಣ ಮಾಡುವುದು ಬಿಟ್ಟು ರಿಸೋರ್ಸಸ್ ಮೊಬಿಲೈಸೇಷನ್ ಹೆಚ್ಚಿಗೆ ಮಾಡಿಕೊಳ್ಳುತ್ತೇವೆಂದು ಹೇಳಿದ್ದು ನೋಡಿದರೆ, ಅದನ್ನು ಲೆಕ್ಕಕ್ಕೆ ತೆಗೆದುಕೊಂಡರೆ ನಿಮ್ಮ ಪರ್ಸೆಂಟೇಜ್ ಏನು ತೋರಿಸುತ್ತದೆ? ಕೈಗಾರಿಕೆಗಳಿಗೆ ಏತಕ್ಕೆ ಕೊಡಬೇಕೆಂದರೆ ಅದಕ್ಕೆ ಹೊರಗಿನಿಂದ ಹಣ ಬರುತ್ತದೆಂಬುದನ್ನು ಒಪ್ಪೋಣ.

ಗ್ರಾಮೀಣಾಭಿವೃದ್ಧಿ, ಪವರ್ ಜನರೇಷನ್, ಆಗ್ರಿಕಲ್ಚರ್, ಈ ಎಲ್ಲಾ ಸೆಕ್ಟಾರ್‌ಗಳು ಪ್ರಮುಖ ಸೆಕ್ಟಾರ್‌ಗಳು ಎಂದು ಹೇಳುವವರು ನಾವು, ಹಳ್ಳಿಯಿಂದ ಬಂದಿದ್ದೇವೆ, ಹಳ್ಳಿಯ ಜನರಿಗೆ ಸಹಾಯ ಮಾಡಬೇಕೆಂಬ ಜನ, ನಿಮ್ಮ ಅಲೋಕೇಷನ್ ಅನ್ನು ನಾವು ನೋಡಿದರೆ ಖಂಡಿತವಾಗಿ ನೀವು ಬಡವರ ಪರ ಮತ್ತು ರೈತರಿಗೆ ಅನುಕೂಲವಾಗತಕ್ಕ ಕೆಲಸವನ್ನು ಇದರಲ್ಲಿ ಮಾಡಿಲ್ಲವೆಂಬುದು ಸ್ಪಷ್ಟವಾಗುತ್ತದೆ. ಆದಕ್ಕೆ ಈ ರಾಜ್ಯದ ಜನ ನಿಮ್ಮನ್ನು ತಿರಸ್ಕಾರ ಮಾಡಿದ್ದು. ನೀವು ಹೇಳುವುದು ಒಂದು, ಮಾಡುವುದು ಒಂದು, ಪ್ರಚಾರ ತೆಗೆದುಕೊಳ್ಳುವುದು; ಆದರೆ ಇನ್ ಪ್ರಾಕ್ಟೀಸ್ ಏನು ಮಾಡಿದ್ದೀರೆಂದರೆ ನಿಮ್ಮ ಅಲೋಕೇಷನ್ ಅತ್ಯಂತ ಕಡಿಮೆ.

ಶಿಕ್ಷಣದ ಬಗ್ಗೆ ಸಾಕಷ್ಟು ಹೇಳಿಕೊಂಡಿದ್ದೀರಿ. ಜನರಲ್ ಎಜ್ಯುಕೇಷನ್‌ಗೆ 1991-92ರಲ್ಲಿ 6.33 ಪರ್ಸೆಂಟ್, 92-93ರಲ್ಲಿ 8.42 ಪರ್ಸೆಂಟ್, 94-95ರಲ್ಲಿ 8.35 ಪರ್ಸೆಂಟ್, 955-96ರಲ್ಲಿ 9.59 ಪರ್ಸೆಂಟ್. ಹೀಗೆ ಮುಂದೆ ಎಲ್ಲಾ ಫಿಗರ್ಸ್ ಇದೆ. 96-97ರಲ್ಲಿ 8.61 ಪರ್ಸೆಂಟ್ ಇದೆ. ಆದರೆ 98-99ರಲ್ಲಿ ತಮ್ಮ ಅಲೋಕೇಷನ್ 6.17 ಅಂದರೆ 2 ಪರ್ಸೆಂಟ್ ನೀವೇ ಕಡಿಮೆ ಮಾಡಿದ್ದೀರಿ.

4.20 ಪಿ.ಎಂ

ಎರಡು ಪರ್ಸೆಂಟ್ ನೀವೇ ಕಡಿಮೆ ಮಾಡಿದ್ದೀರಿ. ಎಜ್ಯುಕೇಷನ್‌ಗೆ ಆದ್ಯತೆ ಕೊಟ್ಟಿದ್ದೇವೆಂದು ಹೊಗಳಿಕೊಂಡಿದ್ದೇ ಹೊಗಳಿಕೊಂಡಿದ್ದು. ಶ್ರೀ ಗೋವಿಂದೇಗೌಡರು ಟೀಚರ್ ರಿಕ್ರೂರ್‌ಮೆಂಟ್ ಮಾಡಿದರು, ವರ್ಲ್ಡ್‌ಬ್ಯಾಂಕ್ ಲೋನಿನಿಂದ ರೂಮುಗಳನ್ನು ಕಟ್ಟಿದಕ್ಕೆ ಅವರಿಗೇನು ಕ್ರೆಡಿಟ್ ಕೊಡಬೇಕೋ ಕೊಡಿ. ಆದರೆ, ನಿಮ್ಮ ಅಲೋಕೇಷನ್ನನ್ನು ಮೋಡಿದರೆ, ಅದು ಗ್ರಾಮೀಣಾಭಿವೃದ್ಧಿ, ಆಗ್ರಿಕಲ್ಚರ್. ಎಜ್ಯುಕೇಷನ್, ಪವರ್ ಜನರೇಷನ್ ಇರಬಹುದು ಎಲ್ಲದರಲ್ಲೂ ನೀವು ಕಡಿಮೆ ಮಾಡಿದ್ದೀರಿ. ನಾವು ಎಲ್ಲದಕ್ಕೂ ಆದ್ಯತೆ ಕೊಟ್ಟಿದ್ದೇವೆ, ಸೋಷಿಯಲ್ ಸೆಕ್ಟಾರ್‌ಗೆ, ವೆಲ್‌ಫೇರ ಸ್ಕೀಮ್ಸ್‌ಗೂ ಕೂಡ ಕಡಿಮೆ ಮಾಡಿಲ್ಲವೆಂದು ನೀವು ನಿಮ್ಮ ಭಾಷಣದಲ್ಲಿ, ಪೋಸ್ಟ್ ಬಜೆಟ್‌ನಲ್ಲಿ ಹೇಳಿದಿರಿ. ಕಡಿಮೆ ಮಾಡಿಲ್ಲವೆಂದು ಮೇಲೆ, ಇದೆಲ್ಲಿಂದ ಬಂತು? ಈ ಫಿಗರ್ಸ್ ಏಕೆ ಹೀಗಿದೆ? ನಿಮ್ಮ ಅಂಕಿ-ಅಂಶಗಳನ್ನು ನೋಡಿದರೆ, ನಿಮಗೇ ಗೊತ್ತಾಗುತ್ತದೆ. ಎಷ್ಟರಮಟ್ಟಿಗೆ ನೀವು ಕಾಳಜಿ ವಹಿಸಿ ಕೆಲಸ ಮಾಡಿದ್ದೀರಿ, ಎಷ್ಟು ಹಣವನ್ನು ಸಂಗ್ರಹಣೆ ಮಾಡಿದ್ದೀರೆಂದು ಗೊತ್ತಾಗುತ್ತದೆ. ಇದರಲ್ಲಿ ಈ ಸರ್ಕಾರ ಸಂಪೂರ್ಣವಾಗಿ

ವಿಫಲಗೊಂಡಿದೆ. ರಿಸೋಸರ್ಸ್ ಮೊಬಿಲೈಜೇಷನ್ ಮಾಡಿಲ್ಲ, ಹಿಂದಿನ 5-6 ವರ್ಷಗಳಿಗೆ ಹೋಲಿಸಿದರೆ, ಇವರು ಎಷ್ಟರಮಟ್ಟಿಗೆ ಈ ಜನರಿಗೆ ಸಹಾಯ ಮಾಡಲು ಪ್ರಾಮಾಣಿಕ ಪ್ರಯತ್ನ ಮಾಡಿದ್ದಾರೆನ್ನುವುದು ಇದರಿಂದ ಗೊತ್ತಾಗುತ್ತದೆ. ಇನ್ನು, ನೀರು ಸರಬರಾಜು. ಇದು ಬಹಳ ಮುಖ್ಯವಾದುದು. ಇದಕ್ಕೆ ನಾವು ಸಾಕಷ್ಟು ಆದ್ಯತೆಯನ್ನು ಕೊಟ್ಟಿದ್ದೇವೆಂದು ಹೇಳಿದ್ದಾರೆ. ಇದಕ್ಕೆ ಮಾಡಿರುವಷ್ಟು ಅಲೋಕೇಷನ್ ಬೇರ್ಯಾವುದಕ್ಕೂ ಮಾಡಿಲ್ಲವೆಂದು ಪ್ರಚಾರ ತೆಗೆದುಕೊಂಡಿದ್ದೇ, ತೆಗೆದುಕೊಂಡಿದ್ದು. 1991ರಲ್ಲಿ 8.29 ಪರ್ಸೆಂಟ್, 92-93ರಲ್ಲಿ 11.26 ಪರ್ಸೆಂಟ್, 93-94ರಲ್ಲಿ 12.62 ಪರ್ಸೆಂಟ್, 94-95ರಲ್ಲಿ 11.54 ಪರ್ಸೆಂಟ್, 96-95ರಲ್ಲಿ 12.63 ಪರ್ಸೆಂಟ್, 96-97ರಲ್ಲಿ 15 ಪರ್ಸೆಂಟ್, 97-98ರಲ್ಲೂ ಕೂಡ 8 ಪರ್ಸೆಂಟ್, 98-99ರಲ್ಲೂ 8 ಪರ್ಸೆಂಟ್ ಅಲೋಕೇಷನ್ ಕೊಟ್ಟಿದ್ದೀರಿ. ಅಂದರೆ, ನೀರು ಸರಬರಾಜಿಗೆ, ನಗರಾಭಿವೃದ್ಧಿಗೆ, ವಸತಿಗೆ ಅರ್ಧಕ್ಕಿಂತಲೂ ಕಡಿಮೆ ಕೊಟ್ಟಿದ್ದೀರಿ. ಮೊನ್ನೆ ಮುಖ್ಯಮಂತ್ರಿಗಳು ಅನ್ನ, ಸೂರು, ನೀರು ಎಂದು ಹೇಳಿದರು. ನೀರೂ ಇಲ್ಲ, ಸೂರೂ ಇಲ್ಲ. ಫಿಗರ್ಸ್, ಅಲೋಕೇಷನ್ಸ್ ಇದೆ. ಮನೆ ಕಟ್ಟಿದ್ದು ಕೂಡ ಲೆಕ್ಕಕ್ಕೆ ಬರುತ್ತದೆ. ನಾನು ಕಟ್ಟಿದಿದ್ದರೆ, ನೀವು ಕಟ್ಟಿರಬಹುದು. ನೀವು ಆಶ್ರಯ ಯೋಜನೆಯಲ್ಲಿ ಎಷ್ಟು ಮನೆ ಕಟ್ಟಿದ್ದೀರೆಂಬುದರ ಬಗ್ಗೆ ಅನ್-ಸ್ಟಾರ್ಡ್ ರಿಪ್ಲೈನಲ್ಲಿ ಈ ಸದನದಲ್ಲಿ ಕೊಟ್ಟಿದ್ದೇನೆ, ತಾವೂ ಕೂಡ ಕೊಟ್ಟಿರಬಹುದು. ಇನ್ನೊಂದು ಸಾರಿ ಕೂಡಿ ಎಂದರೆ ಕೊಡುತ್ತೇನೆ. ಇವತ್ತು ತಾವು ಯಾವುದೇ ಒಂದಕ್ಕೆ ಹೋಲಿಸಿ ನೋಡಿದರೆ ನಿಜವಾಗಲೂ ಅಭಿವೃದ್ಧಿ ಕೆಲಸಗಳಿಗೆ ನೀವು ಗಮನ ಹರಿಸಿಲ್ಲವೆಂಬುದು ತಮ್ಮ ಬಜೆಟ್‌ನಿಂದ ಸ್ಪಷ್ಟವಾಗುತ್ತದೆ. ಅದನ್ನು ಬೇರೆ ಯಾರೂ ತಮಗೆ ತೋರಿಸಬೇಕಾಗಿಲ್ಲ ಅಥವಾ ನಾವು ಟೀಕೆಗೋಸ್ಕರ ಹೇಳುತ್ತಿಲ್ಲ. ನಂತರಾ, ಆಡಿಷನಲ್ ರಿಸೋಸರ್ಸ್ ಮೊಬಿಲೈಜೇಷನ್ ಮಾಡುತ್ತೇವೆಂದು ಹೇಳಿ, ಸಾಕಷ್ಟು ಟ್ಯಾಕ್ಸ್ ಹೇರಿದಿರಿ. ನಾನು ಸುಮಾರು 15 ವರ್ಷಗಳ ಹಿಂದಿನ ಸ್ಟಾಟಿಸ್ಟಿಕ್ಸ್ ಕೊಡುತ್ತೇನೆ. 15 ವರ್ಷಗಳಲ್ಲಿ ಅತ್ಯಂತ ಹೆಚ್ಚಿಗೆ ಟ್ಯಾಕ್ಸ್ ಹಾಕಿದ ಸರ್ಕಾರವೆಂದರೆ ಯಾವುದಾದರೂ ಇದ್ದರೆ, ಅದು ಶ್ರೀಮಾನ್ ಸಿದ್ದರಾಮಯ್ಯನವರ ಸರ್ಕಾರವೇ. 1981-82ರಲ್ಲಿ ಕೇವಲ 17 ಕೋಟಿ, 83-84ರಲ್ಲಿ 11 ಕೋಟಿ, 84-85ರಲ್ಲಿ 87ಕೋಟಿ, 86-87ರಲ್ಲಿ 40 ಕೋಟಿ, 88-89ರಲ್ಲಿ 28 ಕೋಟಿ, ಪುನಃ 89-90ರಲ್ಲಿ ಶ್ರೀ ವೀರೇಂದ್ರ ಪಾಟೀಲರ ಕಾಲದಲ್ಲಿ 8 ಕೋಟಿ, 90-91ರಲ್ಲಿ 140 ಕೋಟಿ, 91-92ರಲ್ಲಿ 17 ಕೋಟಿ, 92-93ರಲ್ಲಿ 200 ಕೋಟಿ, 93-94ರಲ್ಲಿ 48 ಕೋಟಿ, 94-95ರಲ್ಲಿ ತಮ್ಮ ಬಡ್ಜೆಟ್ ಡಿಸೆಂಬರ್‌ನಲ್ಲಿ ಮಂಡನೆಯಾದದ್ದು, ಆದರಲ್ಲಿ 60 ಕೋಟಿ, ಇದಾದ ಮೇಲೆ 95-96ರಲ್ಲಿ 293 ಕೋಟಿ, 97-98ರಲ್ಲಿ 238 ಕೋಟಿ, 98-99ರಲ್ಲಿ 220 ಕೋಟಿ ರೂಪಾಯಿಗಳು ಏರಿಕೆಯಾಗಿದೆ. 3 ಬಡ್ಜೆಟ್‌ಗಳಲ್ಲಿ ತಾವು ಸುಮಾರು 800 ಕೋಟಿ ರೂಪಾಯಿಗಳಷ್ಟು ಏರಿಸಿದ್ದೀರಿ. ಹಿಂದೆ 10 ವರ್ಷಗಳಲ್ಲಿ 800 ಕೋಟಿ ರೂಪಾಯಿಗಳ ಟ್ಯಾಕ್ಸ್ ಹಾಕಿ, ಮತ್ತೆ ನಾವು ಬಡವರಿಗೆ ಸಹಾಯ ಮಾಡುತ್ತೇವೆಂದೂ, ನಮ್ಮದು ಒಳ್ಳೆಯ ಸರ್ಕಾವೆಂದು ಹೇಳಿದರು. ಯಾರು ಮಾಡಿದ್ದು? ಯಾವಾಗ ಮಾಡಿದ್ದು? ತೆಗೆದು ನೋಡಿ. ಜನ ಸಹಿಸುತ್ತಿದ್ದಾರೆಂದು ಏರಿಸಿದ್ದೇ, ಏರಿಸಿದ್ದು.

ನಾವು ಏನೂ ತೊಂದರೆ ಕೊಟ್ಟಿಲ್ಲ, ಇದು ಒಳ್ಳೆಯ ಬಡ್ಜೆಟ್ ಎಂದು ಹೇಳುತ್ತಿದ್ದಾರೆ. ನಾನು ಆಗಲೀ ತಾವು ಅಲೋಕೇಷನ್ನನ್ನು ಯಾವ ರೀತಿಯಾಗಿ ಮಾಡಿದ್ದೀರೆಂಬುದರ ಬಗ್ಗೆ ಹೇಳಿದ್ದೇನೆ. ಆದನ್ನು ಪುನಃ ಪ್ರಸ್ತಾಪಿಸುವುದಿಲ್ಲ. ನಾನು ಫಿಗರ್ಸ್ ಹೇಳಿದಾಗ ಅವರು ನಂಬಲಿಲ್ಲ. ಕಳೆದ ವರ್ಷ ಮಾರ್ಚ್ 18ರಂದು ತಾವು ಬಡ್ಜೆಟ್ ಪ್ರೆಸೆಂಟ್ ಮಾಡಿದಿರಿ, ಈ ವರ್ಷವೂ ಮಾರ್ಚ್ 18ರಂದು ಬಡ್ಜೆಟ್ ಮಾಡಿದಿರಿ ಎಂದು ನಾನು ಹೇಳಿದೆ. ಕಳೆದ ಬಾರಿ ಪ್ಲಾನ್ ಔಟ್‌ಲೇ 4545 ಕೋಟಿ ಇದ್ದದ್ದು, ಈ ಬಾರಿ 5353 ಕೋಟಿ ರೂಪಾಯಿಗಳಾಗಿದೆ. ಕಳೆದ ಸಲ 4545 ಕೋಟಿ ರೂಪಾಯಿಗಳ ಸಂಗ್ರಹಣೆ ಮಾಡಿ, ಆದರಲ್ಲೇ ತಾವು ಖೋತ ತೆಗೆದುಕೊಂಡಿರಿ, ಪುನಃ 5 ಸಾವಿರ ಕೋಟಿ ಮೇಲೆ ಪ್ಲಾನ್ ಔಟ್‌ಲೇ ತಯಾರು ಮಾಡಿ ಇಂಪ್ಲಿಮೆಂಟ್ ಮಾಡುತ್ತಿದ್ದೇವೆಂದರೆ ಹೇಗೆ ಸಾಧ್ಯವಿದೆ? ಇದು ಅಸಾಧ್ಯ. ನೀವೇ ಸೇಲ್ಸ್ ಟ್ಯಾಕ್ಸ್‌ನಲ್ಲಿ 400 ಕೋಟಿ ಹೋಯಿತು, ಎಕ್ಸೈಸ್ ರಾಂಗ್ ಪಾಲಿಸಿಯಿಂದ 100 ಕೋಟಿ ಹೋಯಿತು, ಕೃಷ್ಣಾ ಜಲ ಭಾಗ್ಯ ಯೋಜನೆಯಿಂದ 400 ಕೋಟಿ ರೂಪಾಯಿ ಸಂಗ್ರಹಣೆ ಮಾಡುವುದಕ್ಕಾಗುತ್ತಿಲ್ಲ, ಮಾರ್ಚ್ ಕೊನೆಯೊಳಗೆ ಮಾಡುತ್ತೇವೆಂದು ಹೇಳಿದಿರಿ. ಒಂದು ಸಾವಿರ ಕೋಟಿ ರೂಪಾಯಿ ಹೋದ ಮೇಲೆ, ಈ ದೇಶದಲ್ಲಿ ಒಂದು ಸಾವಿರ ಕೋಟಿ ರೂಪಾಯಿ ಡೆವಲಪ್‌ಮೆಂಟ್ ಇರಲಿಲ್ಲವೇ? ಅಂದರೆ ಆದಕ್ಕೆ ಯಾರಾದರೂ ನಿಮ್ಮ ಸರ್ಕಾರದ ಕೆಲಸ ನಿಂತು ಹೋಗಿದೆ ಎಂದು ಹೇಳಿದರೆ, ಎಲ್ಲಿ ನಿಂತಿದೆ ಎಂದು ಹೇಳುತ್ತೀರಿ. ಮೊನ್ನೆ ಮುಖ್ಯಮಂತ್ರಿಗಳು, ಕಣ್ಣಿದ್ದರೆ ನೋಡಿ, ಕಿವಿ ಇದ್ದರೆ ಕೇಳಿ, ಎಂದರು. ಒಂದು ಸಾವಿರ ಕೋಟಿ ರೂಪಾಯಿಗಳನ್ನು ಎಲ್ಲಿ ಕಾಣುವುದು? ಆವರ ಮನೆಯ ತಿಜೋರಿಯಲ್ಲಿದೆಯೇ ಎಂದು ನೋಡಬೇಕೇ? ಆದಕ್ಕೆ ನೀವು, ಇಷ್ಟು ಸಂಗ್ರಹಣೆ ಮಾಡಿದ್ದೇವೆ, ಇಷ್ಟು ಕೆಲಸ ಮಾಡುವುದಕ್ಕಾಗಲಿಲ್ಲ, ಇಷ್ಟು ಹಣ ಸಂಗ್ರಹಿಸ ಬೇಕೆಂದು ತೀರ್ಮಾನವಾಗಿತ್ತೆಂದು ಒಪ್ಪಿಕೊಳ್ಳಿ. ವಿದ್ಯುಚ್ಛಕ್ತಿ, ಎಜ್ಯುಕೇಷನ್‌ನಲ್ಲಿ ಇಷ್ಟು ಅಲೋಕೇಷನ್ ಮಾಡಿದ್ದೇವೆ, ರಿಸೋಸರ್ಸ್ ಮೊಬಿಲೈಜೇಷನ್ ಕುಂಠಿತವಾದ್ದರಿಂದ ಇಂಪ್ಲಿಮೆಂಟ್ ಮಾಡುವುದಕ್ಕಾಗಲಿಲ್ಲವೆಂದು ಜನರ ಕ್ಷಮೆಯಾದರೂ ಕೇಳಿ. ಜನ ಒಪ್ಪುತ್ತಾರೆ. ಆದನ್ನು ಬಿಟ್ಟು ಈ ಕಡೆ ಕಲೆಕ್ಷನ್ ಮಾಡಿಲ್ಲ, ರಿಸೋರ್ಸಸ್ ಮೊಬಿಲೈಜೇಷನ್ ಆಗಿಲ್ಲ, ಆದರೆ ಹೇಳುವುದನ್ನು ಮಾತ್ರ ಬಿಡುವುದಿಲ್ಲ. ನಾನು ಹೇಳಿದಂತಹ ಮಾತಿಗೆ ತಾವು ಗಮನ ಕೊಡುತ್ತೀರೆಂದು ನಾನು ತಿಳಿದುಕೊಂಡಿದ್ದೇನೆ. ಇವತ್ತು ಇಂಥ ಒಂದು ಪರಿಸ್ಥಿತಿಯಲ್ಲಿ ನಾವಿದ್ದೇವೆ. ಆದರೆ, ಯಾವುದೋ ಒಂದು ರೀತಿಯಲ್ಲಿ ನಾವು ಹೇಳಿಕೊಂಡು ಮುಂದೆ ಹೋದರೆ, ಸರಿ ಹೋಗುವುದಿಲ್ಲ. ಆಮೇಲೆ ಹೈದರಾಬಾದ್-ಕರ್ನಾಟಕ, ಮಲೆನಾಡು, ಬಯಲು ಸೀಮೆ, ಬಾರ್ಡರ್ ಏರಿಯಾಗಳಿಗೆ ಆದ್ಯತೆ ಕೊಟ್ಟು ಇಂಪ್ಲಿಮೆಂಟ್ ಮಾಡಬೇಕು ಮತ್ತು ಹಿಂದುಳಿದ ಭಾಗಗಳಿಗೆ ಬೇರೆ ಪ್ರದೇಶಗಳ ಜೊತೆಯಲ್ಲಿ ಸಮನಾದ ವ್ಯವಸ್ಥೆ ಮಾಡಬೇಕು ಹಾಗೂ ಜನರಲ್ಲಿರುವ ಅಸೂಯೆಯೇನಿದೆ ಆದನ್ನು ತೊಡೆದು ಹಾಕಬೇಕೆನ್ನುವ ದೃಷ್ಟಿಯಿಂದ ಹೈದರಾಬಾದ್ - ಕರ್ನಾಟಕ ಬೋರ್ಡ್ ಮಾಡಿದಿರಿ. ಆದರೆ, ಹಿಂದಿನ ಸರ್ಕಾರ ಪ್ರತಿ ವರ್ಷ 60-65 ಕೋಟಿ ರೂಪಾಯಿ ಖರ್ಚು ಮಾಡಿದರೆ, ಇದರ ಕಾಲದಲ್ಲಿ 66 ಕೋಟಿ ರೂಪಾಯಿ ಅಲೋಕೇಷನ್ ಆಗಿದ್ದು, ಬಿಡುಗಡೆಯಾಗಿದ್ದು ಮಾತ್ರ 27 ಕೋಟಿ ರೂಪಾಯಿಗಳು. ಆ ಕಡೆ ಇರುವ ಸದಸ್ಯರು ಈ ಕುರಿತು ಏಕೆ ಬಾಯಿ ಮುಚ್ಚಿಕೊಂಡು ಕುಳಿತಿದ್ದಾರೋ ನನಗೆ ಗೊತ್ತಿಲ್ಲ. ಕನಿಷ್ಠಪಕ್ಷ ನಿಮ್ಮ ಮತಕ್ಷೇತ್ರದಲ್ಲೀನ ಕೆಲಸಗಳಾಗಿವೆ,

ಏನಾಗಬೇಕೆಂಬುದನ್ನು ಅವರಿ ಮನವರಿಗೆ ಮಾಡಿಕೊಡುವಷ್ಟರಮಟ್ಟಿನ ಶಕ್ತಿಯೂ ಆ ಭಾಗದ ಮುಖಂಡರು ಹೊಂದಿಲ್ಲವೆಂದರೆ ಹೇಗೆ?

ಖಂಡಿತವಾಗಿ ಅಧ್ಯಕ್ಷರೆ, ಇನ್ನೂ 100 ವರ್ಷ ನಾವು ವಿಶೇಷ ರಿಯಾಯಿತಿ ಕೊಡುತ್ತೇವೆ ಕೊಡುತ್ತೇವೆ ಎಂದು ಹೇಳಿಕೊಂಡರೆ ಯಾವ ಭಾಗವೂ ಕೂಡ ಉದ್ಧಾರವಾಗುವುದಿಲ್ಲ. ಅದಕ್ಕೆ ಬೇಕಾದಂಥ ಹಣ ಒದಗಿಸಬೇಕು. ಸಾಧನ ಸಾಮಗ್ರಿಗಳನ್ನು ಕೊಡಬೇಕು. ಮತ್ತು ಅಭಿವೃದ್ಧಿ ಕೆಲಸ ಆಗಿದೆಯೇ ಇಲ್ಲವೂ ಅನುಷ್ಠಾನಕ್ಕೆ ಬಂದಿದೆಯೇ ಇಲ್ಲವೂ ಎನ್ನತಕ್ಕಂಥ ಒಂದು ಇಂಪ್ಲಿಮೆಂಟೇಷನ್ ಪ್ರೋಗ್ರಾಂನಲ್ಲಿ ಕೂಡ ಅವರು ಭಾಗಿಗಳಾಗಬೇಕು. ಆಂದಾಗ ಮಾತ್ರ ಇದು ಸಾಧ್ಯವಾಗುತ್ತದೆ. ಆದರೆ ಈ ಕಡೆ ಗಮನವೇ ಇಲ್ಲ. ಪ್ರಕಾಶ್ ಅವರು ಮುಖ್ಯಮಂತ್ರಿಗಳಿಗೆ ಬಹಳ ಹತ್ತಿರ ಇದ್ದಾರೆ ಎಂದು ನಮ್ಮೆಲ್ಲರ ಅಭಿಪ್ರಾಯ. ಅವರು ಹೈದರಾಬಾದ್ ಕರ್ನಾಟಕದಿಂದ ಬರುತ್ತಾರೆ. ನಾನು ಹೇಳಿದೆ ಕೊನೇಪಕ್ಷ 90-91, 91-92 ಮತ್ತು 92-93ರಲ್ಲಿ ಈ ಐದಾರು ವರ್ಷಗಳಲ್ಲಿ ಎಷ್ಟು ಹಣವನ್ನು ಕೊಟ್ಟಿದ್ದರು, ಎಷ್ಟು ಹಣ ಬಿಡುಗಡೆಯಾಗಿದೆ, ಎಷ್ಟು ಖರ್ಚಾಗಿದೆ.....

ಅಧ್ಯಕ್ಷರು:- ಹತ್ತಿರ ಎಂದರೆ ಹೇಗೆ? ಎಲ್ಲರೂ ಹತ್ತಿರ ಅಲ್ಲವಾ ಕೊಲೀಗ್ಸ್ ಅಂದರೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಇಲ್ಲ, ಇಲ್ಲ. ಆಂದರೆ ಸ್ವಲ್ಪ ಇವರ ಅಡ್ಡೆಸ್, ಇವರ ಮಾತು, ಇವರು ಹೇಳುವುದನ್ನು ಅವರು ಕೇಳುತ್ತಾರೆ ಎನ್ನತಕ್ಕ ಮಾತನ್ನು ನಾಗಮಾರಪಲ್ಲಿಯವರೇ ಹೇಳಿದ್ದಾರೆ. ನಾನು ಹೇಳುವುದಿರಲಿ. ನಾಗಮಾರಪಲ್ಲಿಯವರು ಅವರ ಪಕ್ಷದ ಮುಖಂಡರು, ಮಂತ್ರಿಗಳಾಗಿದ್ದವರು ಅವರು ಹೇಳಿದ್ದಾರೆ.

ಶ್ರೀ ಎಂ.ಪಿ. ಪ್ರಕಾಶ್:- ಅವರು ನಾಗಮಾರಪಲ್ಲಿಯವರು ಆ ತರಹ ಅಡ್ಡೆಸ್ ಎಂದು ಹೇಳಿದ್ದರೆ ಸಂತೋಷಪಡುತ್ತಿದ್ದೆವು. ಆದರೆ ಅವರು ಚಾಡಿ ಹೇಳುತ್ತಾರೆ ಎಂದು ಹೇಳಿದರು. ಯಾವುದಾದರೂ ಸಲಹೆ ಕೊಡುವುದು ಬೇರೆ, ಚಾಡಿ ಹೇಳುವುದು ಬೇರೆ. ಯಾವುದಾದರೂ ಒಂದು ಸಮಿತಿಯಲ್ಲಿದ್ದರೆ ಮತ್ತೊಂದರಲ್ಲಿದ್ದರೆ ಸಲಹೆ ಕೊಟ್ಟಿರುತ್ತೇವೆ. ಸಲಹೆಯೇ ಅವರಿಗೆ ಬಹಳ ತಪ್ಪಾಗಿದ್ದರೆ ಅದನ್ನು ಅವರು ಆ ರೀತಿಯಾಗಿ ಪರಿವರ್ತನೆ ಮಾಡುತ್ತಾರೆ. ಆಮೇಲೆ ನಮ್ಮ ಮುಖ್ಯಮಂತ್ರಿಗಳು ಯಾರ ಸಲಹೆ ಎನ್ನುವುದಲ್ಲ ಎಲ್ಲರ ಸಲಹೆಯನ್ನೂ ಸ್ವೀಕಾರ ಮಾಡುತ್ತಾರೆ. ತಮ್ಮದೇ ಆದ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಕೆಲವು ಜನ ಹತ್ತಿರದವರು ಇದ್ದರೆ, ಸಮಜಾಯಿಷಿ ಕೊಟ್ಟು, ಇಲ್ಲ ಸಾರ್ ಹೀಗಿದೆ ಹೀಗಿದೆ ಆಂದರೆ ಕೇಳುತ್ತಾರೆ. ಆವರು ಎಲ್ಲರಿಗೂ ಸೇರಿಸುವುದಿಲ್ಲ ಹತ್ತಿರ. ಯಾರಿಗೆ ಸೇರಿಸಬೇಕೋ ಅವರಿಗೆ ಸೇರಿಸುತ್ತಾರೆ. ಕೆಲವು ಜನರಿಗೆ ಬಾಗಿಲು ಹೊರಗಿಟ್ಟು ಅಲ್ಲೇ ಸಮಾಧನ ಮಾಡಿ ಕಳುಹಿಸುತ್ತಾರೆ. ಕೆಲವು ಜನರನ್ನು ಒಳಗಡೆ ಕರೆಸುತ್ತಾರೆ. ಕೆಲವು ಜನರನ್ನು ಬೆಡ್ ರೂಮ್ ತನಕ ಕರೆಸುತ್ತಾರೆ. ಹೀಗೆ...

ಅಧ್ಯಕ್ಷರು:- ನಿಮ್ಮ ಸಂಪುಟದಲ್ಲಿ ಯಾರಿದ್ದರು ಆ ತರಹ? ನಿಮ್ಮ ಸಂಪುಟದಲ್ಲಿ ಯಾರು ಹತ್ತಿರ ಇದ್ದರು ಮುಖ್ಯಮಂತ್ರಿಗಳಿಗೆ? ಸುಮ್ಮನೆ ಒಂದು ಐಡಿಯಾ ತಿಳಿದುಕೊಂಡಿರೋಣ ಎಂದು ಕೇಳಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಇಲ್ಲ ನೋಡೋಣ ನಮ್ಮ ಸರ್ಕಾರ ಬಂದಾಗ ಯಾರ ಸಮೀಪವೋ ದೂರವೋ ಎಂದು.

ಅಧ್ಯಕ್ಷರು:- ನೀವು ಹಿಂದೆ ಇದ್ದಾಗ ಯಾರಿದ್ದರು ಆ ತರಹ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಯಾರು ನಮಿಪ ಇದ್ದರು ಯಾರು ದೂರ ಇದ್ದರು ಎಂಬುದು ಜನರಿಗೆ ಗೊತ್ತಿದೆ ಅಥವಾ ಜನ ತಿಳಿದುಕೊಂಡಿದ್ದಾರೆ, ಮುಗಿದು ಹೋಯಿತು. ಈಗ ಆ ಪ್ರಶ್ನೆ ಬರುವುದಿಲ್ಲವಲ್ಲಾ. ನಾನು ಹೇಳುವುದು ಏಕೆಂದರೆ, ನನ್ನ ಉದ್ದೇಶ ಇಷ್ಟೆ.

ಮಾನ್ಯ ಸದಸ್ಯರು:- ಆಗ ಮೂರು ಜನ ಮುಖ್ಯಮಂತ್ರಿಗಳಿದ್ದರು ಸಭಾಧ್ಯಕ್ಷರೇ ಆದ್ದರಿಂದ ಅವರಿಗೆ ಹೇಳುವುದು ಕಷ್ಟವಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಏಕೆಂದರೆ ಅಧ್ಯಕ್ಷರೆ ನಾನು ಎಲ್ಲಾ ಮಂತ್ರಿಮಂಡಲದಲ್ಲಿ ಇದ್ದೆನಲ್ಲ. ಗುಂಡೂರಾವ್ ಮಂತ್ರಿಮಂಡಲದಲ್ಲಿದ್ದೆ. ದೇವರಾಜ ಅರಸ್ ಮಂತ್ರಿಮಂಡಲದಲ್ಲಿದ್ದೆ. ವೀರಪ್ಪಮೊಯಿಲಿ, ಬಂಗಾರಪ್ಪ ಎಲ್ಲರ ಮಂತ್ರಿಮಂಡಲದಲ್ಲಿದ್ದೆ. ಆದ್ದರಿಂದ ಹೇಳುವುದು ಕಷ್ಟವಾಗುತ್ತದೆ. ಪ್ರಕಾಶ್ ಅವರಿಗೆ ಏತಕ್ಕೆ ಹೇಳುತ್ತಿದ್ದೇನೆ ಅಂದರೆ ಇವತ್ತು ಹೈದರಾಬಾದ್ ಕರ್ನಾಟಕ ಡೆವಲಪ್‌ಮೆಂಟ್ ಬೋರ್ಡ್ ಬಗ್ಗೆ ಒಂದು ರಿಪೋರ್ಟ್ ತಯಾರು ಮಾಡಿ ನೀವು ಆದಕ್ಕೆ ಎಷ್ಟು ಹಣ ಬೇಕೋ ಅದನ್ನು ಕೊಡಿಸುವಂಥ ಪ್ರಾಮಾಣಿಕ ಪ್ರಯತ್ನ ಮಾಡದೇ ಇದ್ದರೆ ಆ ಭಾಗ ಹೇಗೆ ಅಭಿವೃದ್ಧಿಯಾಗುತ್ತದೆ? ಈಗ ಉತ್ತರ ಕರ್ನಾಟಕ ಉತ್ತರ ಕರ್ನಾಟಕ ಎಂಬ ಕೂಗು ಎದ್ದಿದೆ ಎಂಬ ಮಾತಿದೆ. ನಾವು ಉತ್ತರ ಕರ್ನಾಟಕ ಬೇರೆ ಮಾಡಿ ಎಂದು ಎಂದೂ ಕೂಡ ಹೇಳಿಲ್ಲ. ಹೇಳುವುದೂ ಇಲ್ಲ. ಇಡೀ ಕರ್ನಾಟಕ ಒಂದಾಗಿರಬೇಕು ಎನ್ನತಕ್ಕವರೇ. ಇಡೀ ಕರ್ನಾಟಕದ ಸಮಗ್ರ ಅಭಿವೃದ್ಧಿಯಾಗಬೇಕು ಎನ್ನತಕ್ಕದ್ದೇ ನಮ್ಮ ನಿಲುವು. ಆದರೆ ನೀವು ಕೃತಿಯಲ್ಲಿ ಮಾಡಿತೋರಿಸಬೇಕಲ್ಲಾ. ಇವತ್ತು ಯಾವ ಉದ್ದೇಶಕ್ಕೋಸ್ಕರ ಬೋರ್ಡ್‌ಗಳು ಸ್ಥಾಪನೆಯಾಗಿವೆ, ಸ್ವಾಟುಟರಿ ಬೋರ್ಡ್ ಮಾಡಿದ್ದೀರಿ, ಆಲ್ಲಿ ಇವತ್ತು ಕೇವಲ ಒಂದು ಕಾರು ಮತ್ತು ಆವರಿಗೆ ಒಂದು ಆಫೀಸ್ ಮಾಡಿಕೊಟ್ಟರೆ ಆ ಭಾಗದ ಸಮಸ್ಯೆಗೆ ಪರಿಹಾರ ಕೊಟ್ಟಂತಾಗುತ್ತದೆಯೇ?

ಹಣ ಕೊಡಬೇಕು. ಹಣ ಕೊಟ್ಟಮೇಲೆ ಆ ಹಣದ ಉಪಯೋಗ ಆಗಿದೆಯೇ ಇಲ್ಲವೋ ಎಂಬುದನ್ನು ನೋಡಬೇಕು ಮತ್ತು ಕೊರತೆ ಬಿದ್ದರೆ ಇನ್ನೂ ಹೆಚ್ಚಿಗೆ ಮಾಡಬೇಕು. ನೀವು 1990-91ರಲ್ಲಿ ಅಥವಾ 1989-90ರಲ್ಲಿ 60 ಕೋಟಿ ರೂಪಾಯಿ ಕೊಟ್ಟರೆ ಇವತ್ತೂ 60 ಕೋಟಿ ರೂಪಾಯಿ ಕೊಟ್ಟರೆ ಇವತ್ತು ಹಣದುಬ್ಬರ ಎಷ್ಟಿದೆ? ಇವತ್ತಿನ ಲೆಕ್ಕದಲ್ಲಿ ನೀವು 100 ಕೋಟಿ ರೂಪಾಯಿ ಮೇಲೆ ಕೊಡಬೇಕು. ಆದರೂ ಪ್ರಕಾಶ್ ಅವರು ಸುಮ್ಮನಿದ್ದಾರೆ. ಎಂ.ಎಸ್. ಪಾಟೀಲರು ಏನು ಹೇಳುತ್ತಾರೆ ಆದಕ್ಕೆ 'ಎಸ್' ಎಂದು ಹೇಳುತ್ತಾರೆ. ನಮಗೆ ಹೇಳುತ್ತಿದ್ದರು. ಏನೆಂದರೆ ನೀವೆಲ್ಲಾ ಯೆಸ್ ಎಂದುಕೊಂಡು ಬರುತ್ತೀರಿ, ನಾವೆಲ್ಲಾ ಬಹಳ ಆಸರ್ಟ್ ಮಾಡುತ್ತೇವೆ ಎಂದು ಹೇಳಿ ಹೊರಗಡೆ ಭಾಷಣಗಳನ್ನು ಮಾಡುತ್ತಿದ್ದರು. ಈಗ ಏನು ಮಾಡಿದ್ದೀರಿ ನೀವು? ಈಗ ಬರೀ ಮೂರು ವರ್ಷದ್ದು ತೆಗೆದುನೋಡಿ. ಹಿಂದಿನಿಂದ ಮೂರುನಾಲ್ಕು ವರ್ಷದ್ದು ತೆಗೆದು ನೋಡಿದರೆ ನಿಜವಾಗಿಯೂ ನೀವೇ ನಾಚಿಕೆಯಿಂದ ತಲೆತಗ್ಗಿಸುತ್ತೀರಿ ನಾವೂ ತಪ್ಪು ಮಾಡಿದ್ದೇವೆ ಎಂದು. ಎಂಥ ಸರ್ಕಾರಕ್ಕೂ ಇನ್ನೂ ಬೆಂಬಲ ಕೊಟ್ಟುಕೊಂಡು ಪ್ರಕಾಶ್ ಅಲ್ಲೇ ಇದ್ದಾರೆ. ಎಂ.ಎಸ್. ಪಾಟೀಲರು ಅಲ್ಲೇ ಇದ್ದಾರೆ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೆ, ಈಗ ಎಲ್ಲಿಗೆ ಬರಬೇಕು ಅವರು? ಈಗ ಆಲ್ಲೇ ಇದ್ದಾರೆ ಅಂದರೆ ಎಲ್ಲಿಗೆ ಬರಬೇಕು ಅವರು ಎಂಬುದನ್ನು ಹೇಳಿಬಿಡಬೇಕು. ಅವರ ಪರಿಸ್ಥಿತಿಯನ್ನು ಅತ್ತೂ ಇಲ್ಲ ಇತ್ತೂ ಇಲ್ಲ ಆ ಪರಿಸ್ಥಿತಿಗೆ ನೀವು ಮಾಡುವುದಕ್ಕೆ ಹೋಗಬೇಡಿ. ಎಲ್ಲಿಗೆ ಬರಬೇಕು ಎಂಬುದನ್ನು ನೇರವಾಗಿ ಹೇಳಿ.

ಶ್ರೀಮತಿ ಪ್ರಮಿಳಾ ನೇಸರ್ಗಿ:- ನಾವು ಸದಾ ಸ್ವಾಗತ ಮಾಡುತ್ತೇವೆ ಅವರಿಗೆ.

ಶ್ರೀ ವಾಟಾಳ್ ನಾಗರಾಜ್:- ಅವರು ಭಯ ಬಿದ್ದುಬಿಟ್ಟರು ನೀವು ಸ್ವಾಗತ ಎಂದು ಕರೆದತಕ್ಷಣ. ಅವರಾದರೂ ಸ್ವಾಗತ ಅಂದಿದ್ದರೆ ಸ್ವಲ್ಪ ಮನಸ್ಸು ಮಾಡುತ್ತಿದ್ದರು. ನಿಮ್ಮ ಸ್ವಾಗತಕ್ಕೆ ಅವರಿಗೆ ಭಯ.

ಅಧ್ಯಕ್ಷರು:- ಏನಾಯಿತು? ನಾನೇನೋ ಓದುತ್ತಾ ಇದ್ದೆ.

ಶ್ರೀ ಎಂ.ಪಿ. ಪ್ರಕಾಶ್:- ಸನ್ಮಾನ್ಯ ಅಧ್ಯಕ್ಷರೆ, ಮೊನ್ನೆ ಮಲ್ಲಿಕಾರ್ಜುನ ಖರ್ಗೆಯವರು ಬಂದರು ಎಂದು ಮುಖ್ಯಮಂತ್ರಿಗಳು ಇಷ್ಟು ಗೌರವ ಕೊಟ್ಟು 97-98ನೇ ಸಾಲಿಗೆ ದುಡ್ಡು ಕೊಡಬೇಕಾಗಿದ್ದರಲ್ಲಿ 30 ಕೋಟಿ ರೂಪಾಯಿ ಬಿಡುಗಡೆ ಮಾಡಿಸಿದರು. ನೋಡಿ ನಮ್ಮ ಮಾತಿಗಿಂತ ಅವರ ಮಾತಿಗೆ ಎಷ್ಟು ಬೆಲೆ ಇದೆ? ನೋಡಿ ನಮ್ಮದು ಸುಮ್ಮನೆ ಹೇಳಿದ್ದಷ್ಟೆ.

ಅಧ್ಯಕ್ಷರು:- ಪ್ರಮಿಳಾ ಅವರೇನೋ ಸ್ವಾಗತ ಅಂತರು. ಯಾರಿಗೆ ಸ್ವಾಗತ?

ಶ್ರೀಮತಿ ಪ್ರಮಿಳಾ ನೇಸರ್ಗಿ:- ಖರ್ಗೆಯವರು ಹೇಳಿದರು. ಆಗ ಯಾವ ಪಕ್ಷಕ್ಕೋಸ್ಕರ ಸ್ವಾಗತ ಎಂದು ಮಾತುಕತೆ ನಡೆಯಿತು ಇಲ್ಲಿ. ನಮ್ಮ ಪಕ್ಷ ಸದಾಸ್ವಾಗತ ಬಯಸುತ್ತದೆ ಪ್ರಕಾಶ್ ಅವರು ಬರುವುದಾದರೆ ಎಂದು ಹೇಳಿದೆ. ಅಲ್ಲಿ ಹೋಗುವುದು ಬೇಡಿ.

ಶ್ರೀ ವಾಟಾಳ್ ನಾಗರಾಜ್:- ಅಧ್ಯಕ್ಷರೆ, ಖರ್ಗೆಯವರು ನೀವು ಏತಕ್ಕೆ ಅಲ್ಲಿ ಕುಳಿತಿದ್ದೀರಿ ಎಂದು ಹೇಳಿದರು. ಅಂದರೆ ನಮ್ಮ ಕಡೆ ಬನ್ನಿ ಎನ್ನುವ ಅರ್ಥದಲ್ಲಿ. ಇವರೇನು ಮಾಡಿದರು ತಕ್ಷಣ ಸ್ವಾಗತ ಅಂದರು. ಅವರು ಭಯ ಬಿದ್ದುಬಿಟ್ಟರು ನಿಮ್ಮ ಕಡೆ ಬರುವುದಿಲ್ಲ ನಾವು ಎಂದು. ಸ್ವಲ್ಪ ಹೆಚ್ಚುಕಡಿಮೆ....

ಶ್ರೀಮತಿ ಪ್ರಮಿಳಾ ನೇಸರ್ಗಿ:- ಅವರು ಹೇಳಿಲಿಲ್ಲ ಬರುವುದಿಲ್ಲ ಎಂದು.

ಶ್ರೀ ವಾಟಾಳ್ ನಾಗರಾಜ್:- ಇಲ್ಲ, ಅವರು ಭಯ ಬಿದ್ದರು.

ಶ್ರೀಮತಿ ಪ್ರಮಿಳಾ ನೇಸರ್ಗಿ:- ಇಲ್ಲ. ಅವವು ಭಯೂನೂ ಬೀಳಲಿಲ್ಲ ಏನೂ ಮಾಡಲಿಲ್ಲ.

ಶ್ರೀ ವಾಟಾಳ್ ನಾಗರಾಜ್:- ನಾನು ಅವರ ಶರೀರವನ್ನು ನೋಡಿದೆ. ನಡುಕ ಬಂದುಬಿಡ್ತು.

ಶ್ರೀಮತಿ ಪ್ರಮಿಳಾ ನೇಸರ್ಗಿ:- ಮೌನಂ ಸಮ್ಮತಿ ಲಕ್ಷಣಂ.

ಶ್ರೀ ವಾಟಾಳ್ ನಾಗರಾಜ್:- ನಾನು ಪ್ರಕಾಶ್ ಅವರ ಶರೀರ ನೋಡಿದೆ. ನಡುಗಿ ಬಿಟ್ಟರು ನೀವು ಹೇಳಿದ ತಕ್ಷಣ. ಭಯ ಬಂದುಬಿಡ್ತು ಅವರಿಗೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ನೀವು ಕರೆದುಕೊಳ್ಳಿ. ಪವಾರ್ಗಿಲ್ಲ. ಈಗ ಒಬ್ಬರಿಗೆ ಒಬ್ಬರು ಕರೆದುಕೊಳ್ಳುತ್ತಿದ್ದಾರೆ. ಈಗ ದೇಶಪಾಂಡೆಯವರು ಬಂದಿದ್ದಾರೆ. ಸರ್‌ನಾಯಕ್ ಬಂದಿದ್ದಾರೆ. ಜಿಗಜಿಣಗಿ ಬಂದಿದ್ದಾರೆ.

ಶ್ರೀ ಡಿ.ಆರ್. ಪಾಟೀಲ್:- ಪ್ರಕಾಶ್ ಅವರಿಗೆ ಎಂ.ಎಸ್. ಪಾಟೀಲರಿಗೆ ಬೇರೆ ಕಡೆ ಹೋಗುವ ಅನಿವಾರ್ಯ ಪ್ರಸಂಗ ಬಂದರೆ ಅವರು ನಮ್ಮ ಕಡೆ ಬರುತ್ತಾರೆಯೇ ಹೊರತು ಬಿ.ಜೆ.ಪಿ.ಗೆ ಹೋಗಲಿಕ್ಕಿಲ್ಲ.

ಶ್ರೀ ಡಿ.ಎ. ಸದಾನಂದಗೌಡ:- ಅಧ್ಯಕ್ಷರೆ, ಈಗ ಅವರಾಗಿ ಬರುವುದಿದ್ದರೆ ನಮ್ಮ ಸ್ವಾಗತ ಇದೆ. ನಾವು ಬಲಾತ್ಕಾರ ಮಾಡುವಂಥ ಪಾರ್ಟಿಯವರಲ್ಲ. ಮನಸ್ಸಿದ್ದು ಬಿ.ಜೆ.ಪಿ. ಒಳ್ಳೆಯ ಪಾರ್ಟಿ ಎಂದು ಆಲೋಚನೆ ಮಾಡಿ ಅವರು ಬರುವುದಿದ್ದರೆ ನಮ್ಮ ಸ್ವಾಗತ ಇದೆ ಅವರಿಗೆ. ಆದರೆ ಬಲಾತ್ಕಾರವಾಗಿ ನಾವು ಯಾರನ್ನೂ ಕರೆದುಕೊಳ್ಳುವುದಿಲ್ಲ.

ಶ್ರೀಮತಿ ಪ್ರಮಿಳ ನೇಸರ್ಗಿ:- ಅವರು ತತ್ವ ಮತ್ತು ಸಿದ್ಧಾಂತಕ್ಕೆ ಹೊಂದಿಕೊಂಡು ಬರುತ್ತೇನೆ ಎಂದು ಒಪ್ಪಿಕೊಂಡಿದ್ದಾರೆ.

ಶ್ರೀ ಯು.ಆರ್. ಸಭಾಪತಿ:- ಹಿಂದೆ ವಸಂತ ಬಂಗೇರಾ ಅವರನ್ನು ಬಿ.ಜೆ.ಪಿ.ಯವರು ಕಿಡ್ನ್ಯಾಪ್ ಮಾಡಿ ಇಟ್ಟುಕೊಂಡಿದ್ದರು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ನಾನು ಏತಕ್ಕೆ ಈ ಮಾತು ಈ ಮಾತು ಹೇಳಿದೆ ಅಂದರೆ ಇವರು ಇಂಥ ಕಾರ್ಯಕ್ರಮಕ್ಕೆ ಸರ್ಕಾರಲ್ಲಿ ಆದ್ಯತೆ ಇಲ್ಲ. ಅವೆಲ್ಲಾ ಬರೀ ಪೇಪರ್ ಮೇಲೆ. ಬರೀ ಹೇಳಿಕೆಗಳು ಬಜೆಟ್‌ನಲ್ಲಿ ಬರುವುದು. ರೀಜನಲ್ ಇಂಬ್ಯಾಲೆನ್ಸನ್ನು ಸರಿಪಡಿಸುತ್ತೇವೆ ಎಂದು ಹೇಳಿ ಇವತ್ತಿನ ದಿವಸ ಆ ದಿಕ್ಕಿನಲ್ಲಿ ಯಾವ ಪ್ರಾಮಾಣಿಕ ಪ್ರಯತ್ನ ಕೂಡ ಇವತ್ತು ನಡೆದಿಲ್ಲ. ಅದಕ್ಕಾಗಿ ನಾನು ಈ ಮಾತನ್ನು ಹೇಳುತ್ತಿದ್ದೇನೆಯೇ ಹೊರತಾಗಿ ಅವರನ್ನು ಬರೀ ಆ ಪಾರ್ಟಿಗೆ ಬನ್ನಿ ಈ ಪಾರ್ಟಿಗೆ ಬನ್ನಿ ಎಂದು ಹೇಳುತ್ತಾ ಇಲ್ಲ. ಈಗ ನ್ಯಾಚುರಲಿ ಒಬ್ಬರಿಗೊಬ್ಬರು ಬರುತ್ತಾ ಇದ್ದಾರೆ. ನೋಡೋಣ ಇವರು ಕೊನೆಯಲ್ಲಿ ನಿರ್ಣಯ ತೆಗೆದುಕೊಳ್ಳುತ್ತಾರೋ ಏನೋ. ಪ್ರಕಾಶ್‌ರಂಥವರು ಹತ್ತಿರದಲ್ಲಿರತಕ್ಕವರು ತಕ್ಷಣ ನಿರ್ಣಯ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಸಮೀಪ ಇದ್ದವರು ಬಹಳ ಬೇಗ ನಿರ್ಣಯ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಸ್ವಲ್ಪ ದೂರ ದೂರ ಇರತಕ್ಕ ಜಿಗಜಿಣಗಿಯವರು ತೆಗೆದುಕೊಂಡರು. ದೇಶಪಾಂಡೆ ತೆಗೆದುಕೊಂಡರು. ಶರಣಪ್ಪ ತೆಗೆದುಕೊಂಡರು. ಸಮೀಪ ಇದ್ದು ದೂರ ಆಗಿದ್ದರು.

ಶ್ರೀಮತಿ ಪ್ರಮಿಳ ನೇಸರ್ಗಿ:- ಅವರು ಕೇಳಿದ್ದು ಸ್ವದೇಶಾಭಿಮಾನಿಗಳೋ ವಿದೇಶಾಭಿಮಾನಿಗಳೋ ಎಂದು. ನಮಗೆ ಗೊತ್ತಿರುವ ಹಾಗೆ ಪ್ರಕಾಶ್ ಅವರು ಯಾವಾಗಲೂ ಕೂಡ ಭಾರತದ ಬಗ್ಗೆ ಅಭಿಮಾನ ಇಟ್ಟಿರುವವರು. ಸ್ವದೇಶದ ಅಭಿಮಾನಿಗಳು ಎಂದು ನಾನು ಅಂದುಕೊಂಡಿದ್ದೇನೆ.

ಶ್ರೀ ಎಂ.ಪಿ. ಪ್ರಕಾಶ್:- ಭಾರತೀಯ ಜನತಾ ಪಕ್ಷ ಒಂದೇ ಸ್ವದೇಶಿ ಮತ್ತು ರಾಷ್ಟ್ರಪ್ರೇಮ ಎಂಬುದು ಏನಿದೆ ಅದು ಬೇರೆ ಪಕ್ಷಗಳಿಗೂ ಕೂಡ ಅಷ್ಟೇ ಅಭಿಮಾನ ಇದೆ. ನಮ್ಮದೂ ಕೂಡ ಸ್ವಾವಲಂಬನ ಮತ್ತು ಸ್ವದೇಶಿ. ಎರಡನೆಯದು.....

ಅಧ್ಯಕ್ಷರು:- ಅವರು ಹೇಳಿದ ಕಾಂಟೆಕ್ಸ್ಟ್ ಬೇರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಅವರ ಕಾಂಟೆಕ್ಸ್ಟ್ ಗೊತ್ತಾಯಿತು. ಆದರೆ ಕಿರಿಕಿರಿ ಆಗಬಾರದು ಎಂದು ಸುಮ್ಮನಿದ್ದೆ.

ಶ್ರೀ ಎಂ.ಪಿ. ಪ್ರಕಾಶ್:- ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದರು ನಾವು ಬಹಳ ಹತ್ತಿರದವರಿದ್ದೆವು ಎಂದು. ಹತ್ತಿರದವರಿದ್ದುದರಿಂದರೇ ಅಂಥ ಉತ್ತಮವಾದ ಖಾತೆಗಳಿದ್ದವು. ಆದರೆ ಅವರು ದೂರ ಇರಲಿಲ್ಲ, ಬಹಳ ಹತ್ತಿರದಲ್ಲೇ ಇದ್ದರು.

ಆದ್ದರಿಂದಲೇ ಅವರು ನಮ್ಮ ನಾಯಕರನ್ನು ಎಂದೂ ಟೀಕೆ ಮಾಡಲಿಲ್ಲ. ಹೊರಗೆ ಹೋಗುವಾಗ ಬೇರೆ ಯಾರನ್ನೇ ಉಪಯೋಗಿಸಿದರೇ ವಿನಾ ನಮ್ಮ ನಾಯಕರನ್ನು ಅವರು ಉಪಯೋಗಿಸಿಕೊಳ್ಳಲಿಲ್ಲ. ಆದ್ದರಿಂದ ಅವರೇ ಹತ್ತಿರದವರು. ನಾವು ಬರೀ ಮೇಲ್ನೋಟಕ್ಕೆ ಹತ್ತಿರದವರು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ನೋಡಿ ಈಗ ಒಂದಕ್ಕೊಂದು ಗೊತ್ತಾಗುತ್ತಿದೆ ಅಧ್ಯಕ್ಷರೇ ತಮಗೆ ಸ್ವಲ್ಪ ಬಹಳ ಗೊತ್ತಾಗಿರಬೇಕು. ನಮಗೆ ಈಗ ಸ್ವಲ್ಪ ಗೊತ್ತಾಗುತ್ತಿದೆ. ಏಕೆಂದರೆ ಹತ್ತಿರ ಇದ್ದೂ ದೂರ. ಅವರು ದೂರ ಇದ್ದರೂ ಹತ್ತಿರ.

ಅಧ್ಯಕ್ಷರು:- ನನಗೆ ಇದರ ಗಂಧವೇ ಗೊತ್ತಿಲ್ಲ. ನಾನೆಂದೂ ಒಳಗೆ ಬಂದವನಲ್ಲ. ಹೊರಗೇ ಇದ್ದೇನೆ ನಾನು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಅದಕ್ಕಾಗಿ ಬಹಳ ಒತ್ತಡವನ್ನು ತರತಕ್ಕ ಸಾಧ್ಯತೆ ಇತ್ತು; ತರಲಿಲ್ಲ. ಈವೊಂದು ಏರಿಯಾ ಡೆವಲಪ್‌ಮೆಂಟ್ ಪ್ರೋಗ್ರಾಮ್ಸ್ ಆವು ಯಾವ ಭಾಗದಲ್ಲಿಯೇ ಇರಲಿ ಮಲೆನಾಡಿನಲ್ಲಿ ಆಗಲಿ, ಹೈದರಾಬಾದ್ ಕರ್ನಾಟಕ ಡೆವಲಪ್‌ಮೆಂಟ್ ಏರಿಯಾದಲ್ಲಾಗಲಿ ಇದಕ್ಕೆ ಎಷ್ಟು ಹಣವನ್ನು ಒದಗಿಸಬೇಕಾಗಿತ್ತೋ ಅಷ್ಟು ಹಣವನ್ನು ಒದಗಿಸಿಲ್ಲ. ಆ ರಿಪೋರ್ಟ್‌ನ ಆಧಾರದ ಮೇಲೆ ಆ ಭಾಗದಲ್ಲಿ ರೀಜನಲ್ ಇಂಬ್ಯಾಲೆನ್ಸ್‌ನ್ನು ಸರಿಪಡಿಸಬೇಕು ಎನ್ನುವುದು ಜನರ ಆನಿಸಿಕೆ ಇದೆ. ಆ ಆನಿಸಿಕೆಯ ಪ್ರಕಾರ ಇವತ್ತು ಈ ಸರ್ಕಾರ ನಡೆದಿಲ್ಲ. ಆದಕ್ಕೆ ಕಾರ್ಯಕ್ರಮಗಳನ್ನು ನೀಡಿಲ್ಲ. ಆದನ್ನು ಸಾಕಷ್ಟು ಡ್ಯಾಮೇಜ್ ಮಾಡತಕ್ಕ ಪ್ರಯತ್ನವನ್ನು ಮಾಡಿದೆಯೇ ಹೊರತಾಗಿ ಆ ಭಾಗಕ್ಕೆ ಸಹಾಯ ಮಾಡತಕ್ಕ ಯಾವ ಪ್ರಯತ್ನ ನಡೆದಿಲ್ಲ. ಮೇಲಿನ ಮಾತಿಗೆ ಉತ್ತರ ಕರ್ನಾಟಕಕ್ಕೆ ಅನ್ಯಾಯ ಎಲ್ಲಿಯಾಗಿದೆ? ಟೆಲ್ಕೋ ಕೊಟ್ಟಿದ್ದೇವೆ. ಆವೊಂದು ಫ್ಯಾಕ್ಟರಿಯನ್ನು ಹುಬ್ಬಳ್ಳಿಯಲ್ಲಿ ತಂದಿದ್ದೇವೆಂದು ಹೇಳುವುದಲ್ಲ. ಒಂದೆರಡು ಇಂಡಸ್ಟ್ರೀಗಳನ್ನು ಉದಾಹರಣೆಗೆ ಹೇಳುವುದಕ್ಕಾಗುತ್ತದೆಯ? ಆಂತಹವು ನೂರು ಇಂಡಸ್ಟ್ರೀಗಳು ಬೆಂಗಳೂರಿನಲ್ಲಿ ಬಂದಿರಬಹುದು. ಒಂದೆರಡು ಇಂಡಸ್ಟ್ರೀ ಮಾಡಿ ಅಲ್ಲಿ ಮಾಡಿದ್ದೇವೆಂದು ಹೇಳುವುದಲ್ಲ. ಇಲ್ಲಿ ಸಮಗ್ರವಾಗಿ ಸಾಮಾನ್ಯ ಜನರಿಗೆ ಉಪಯೋಗವಾಗತಕ್ಕ ಕೆಲಸಗಳು ಏನಿವೆ ರಸ್ತೆಗಳು ಇರಬಹುದು, ಕುಡಿಯುವ ನೀರಿನ ವ್ಯವಸ್ಥೆ ಇರಬಹುದು, ಟ್ಯಾಂಕ್ ಇರಬಹುದು ಅಥವಾ ಇರಿಗೇಷನ್ ಫೆಸಿಲಿಟೀಸ್ ಕೊಡತಕ್ಕ ವ್ಯವಸ್ಥೆ ಇರಬಹುದು. ಇವೆಲ್ಲಾ ಯೋಜನೆ ಮಾಡಿಕೊಂಡು ಕೆಲಸ ಮಾಡಬೇಕೇ ಹೊರತಾಗಿ, ಆ ಭಾಗದಲ್ಲಿ ಯಾವುದೋ ಒಂದು ಫ್ಯಾಕ್ಟರಿಯನ್ನು ಹುಬ್ಬಳ್ಳಿಯಲ್ಲಿ ಮಾಡಿದ್ದೇವೆಂದು ಹೇಳಿಕೊಂಡು ಸಮಾಧಾನಪಟ್ಟುಕೊಂಡು

ಮುಕ್ತಾಯ ಮಾಡತಕ್ಕದ್ದಲ್ಲ. ಆದಕ್ಕೆ ಹಚ್ಚಿನ ಹಣವನ್ನು ಈ ಸಾರಿಯಾದರೂ ಒದಗಿಸುತ್ತಾರೆಂದು ನಾನು ತಿಳಿದುಕೊಂಡಿದ್ದೆ. ಕನಿಷ್ಟಪಕ್ಷ ಈ ಸಾರಿಯಾದರೂ ಕೂಡ 1998-99ರಲ್ಲಿ ನೂರು ಕೋಟಿ ರೂಪಾಯಿ ಕೊಡುತ್ತಾರೆಂದು ನಾನು ಭಾವಿಸಿದ್ದರೆ ಇವರು ಎಷ್ಟು ಹಣವನ್ನು ಆದಕ್ಕೆ ಇಟ್ಟಿದ್ದಾರೆಂದರೆ ಆದರಲ್ಲೂ ಎಲ್ಲಾ ಪ್ರಾಜೆಕ್ಟ್‌ಗಳೂ ಸೇರಿ 109 ಕೋಟಿ ರೂಪಾಯಿ. ಆದರಲ್ಲಿ ಮಲೆನಾಡು ಪ್ರದೇಶ ಅಭಿವೃದ್ಧಿ ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಬಯಲುಸೀಮೆ ಈ ಎಲ್ಲಾ ಡೆವಲಪ್‌ಮೆಂಟ್ ಕಾರ್ಯಕ್ರಮ ಸೇರಿ 109 ಕೋಟಿ ರೂಪಾಯಿ. ಎಲ್ಲಾ ಸೇರಿ ಇಷ್ಟು ಹಣವನ್ನು ಇಡತಕ್ಕ ಕೆಲಸವನ್ನು ಇವರು ಮಾಡಿದ್ದಾರೆ. ಅವರು ಪುಟ-1ರಲ್ಲಿ ಕೊಟ್ಟಂತಹ ವಿವರದಲ್ಲಿ ಅದು ಇದೆ. 1998-99ರಲ್ಲಿ ಎಷ್ಟು ಹಣವನ್ನು ಒದಗಿಸಿದ್ದಾರೆಂದರೆ ಕೇವಲ 109ಕೋಟಿ ರೂಪಾಯಿಗಳು ಮಾತ್ರ. ಇದರಲ್ಲಿ ಎಲ್ಲರೂ ಹಂಚಿಕೊಳ್ಳಬೇಕು. ಕೆಲವರಿಗೆ 50ಕೋಟಿ ಬರಬಹುದು ಇನ್ನೊಬ್ಬರಿಗೆ 20ಕೋಟಿ ಬರಬಹುದು ಮತ್ತೊಬ್ಬರಿಗೆ 10ಕೋಟಿ ಬರಬಹುದು ಈ ರೀತಿಯಾಗಿದೆ. ಈ ಪ್ಲಾನ್‌ಗಳು ಹೇಗೆ ಮಲಗುತ್ತವೆ ನೋಡಿ; ಹಾಗೆಯೇ ಅವರು ಮಲಗಿದ್ದಾರೆ. ಈಗ ಸರ್ಕಾರ ಸಹ ಮಲಗಿದೆ ನೋಡಿ. ಇದು ಎಲ್ಲಿ ಇಂಪ್ಲಿಮೆಂಟ್ ಆಗುತ್ತದೆ? ನಮ್ಮ ಏರಿಯಾ ಡೆವಲಪ್‌ಮೆಂಟ್ ಅಷ್ಟೆ, ಹೈದರಾಬಾದ್ ಕರ್ನಾಟಕ ಮಲಗಿ ಹೋಯಿತು. ಫೈನಾನ್ಸ್ ಮಿನಿಸ್ಟರ್ ಕೂಡ ನಿದ್ರೆ ಮಾಡುತ್ತಿದ್ದಾರೆ. ನಾವು ಏನು ಮಾಡುವುದು ಈಗ? ನಾವು ಯಾರಿಗೆ ಹೇಳುವುದು? ನಾವು ದೇವರಿಗೆ ಹೇಳಬೇಕು.

ಶ್ರೀಮತಿ ಪ್ರಮೀಳಾ ನೇಸರ್ಗಿ: ದೇವರೆಲ್ಲಿದ್ದಾನೆ ಎಂಬುದು ಮತ್ತೊಂದು ಪ್ರಶ್ನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಆದಕ್ಕೊಂದು ವ್ಯಾಖ್ಯಾನವನ್ನು ಮಾಡಿದ್ದಾರೆ ಮುಖ್ಯಮಂತ್ರಿಗಳು. ಆದಕ್ಕೆ ಇವರ ಪ್ಲಾನ್ ಪ್ರಾವಿಷನ್ಸ್ ನೋಡಿದರೆ, ಖಂಡಿತವಾಗಿಯೂ ಈ ಏರಿಯಾ ಡೆವಲಪ್‌ಮೆಂಟ್‌ಗೆ ಸಹಾಯ ಮಾಡಬೇಕೆನ್ನುವ ಮನಸ್ಸು ಸರ್ಕಾರಕ್ಕೆ ಇಲ್ಲ. ಅಭಿವೃದ್ಧಿ ಪಡಿಸಬೇಕೆನ್ನುವ ಇಚ್ಛೆಯಿಲ್ಲ. ಆ ಭಾಗ ಯಾವರೀತಿಯಾಗಿ ಹಿಂದುಳಿದಿದೆ, ಅಷ್ಟೇ ಹಿಂದುಳಿಯಲಿ ಎನ್ನುವ ಆಸೆ ಆಕಾಂಕ್ಷೆಯಿಂದ ಇವತ್ತಿನ ದಿನ ಈ ಸರ್ಕಾರ ನಡೆಯುತ್ತಿದೆ. ಈ ಸರ್ಕಾರವನ್ನು ಎಚ್ಚರಿಸತಕ್ಕದ್ದು ಜನ ಕೆಲಸ ಮಾಡಬೇಕಾಗುತ್ತದೆ. ಏಕೆಂದರೆ ಚಳುವಳಿ ಪ್ರಾರಂಭ ಮಾಡಿದರೆ, ಏಕೆ ಚಳುವಳಿ ಏಕಾಗುತ್ತದೆಂದರೆ, ಯಾವಾಗ ಸರ್ಕಾರ ಸಂಪೂರ್ಣವಾಗಿ ಆ ಭಾಗಕ್ಕೆ ನೆಗ್ಲೆಕ್ಟ್ ಮಾಡುತ್ತದೊ ಅಥವಾ ಅಲಕ್ಷ್ಯ ಮಾಡುತ್ತದೊ ಆಗ ಜನ ರೊಚ್ಚಿಗೆದ್ದು ಸರ್ಕಾರದ ಮೇಲೆ ಬೀಳುತ್ತಾರೆ. ಬ್ಯುರೋಕ್ರಾಟ್ಸ್ ಮೇಲೆ ಬೀಳುತ್ತಾರೆ, ಆಫೀಸುಗಳಲ್ಲಿ ಜನ ನುಗ್ಗಿ ಗಲಾಟೆ ಮಾಡುವುದು ಇದಕ್ಕೋಸ್ಕರ. ಆದಕ್ಕಾಗಿ ನಾನು ಇವತ್ತು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ, ಕನಿಷ್ಟ ಈಗಲಾದರೂ ಎಚ್ಚರವಾಗಿ ಸರ್ಕಾರ ಅಭಿವೃದ್ಧಿಗೆ ಸಹಾಯವಾಗತಕ್ಕ ಕೆಲಸ ಮಾಡುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಇದಕ್ಕೆ ಹೆಚ್ಚಿಗೆ ಹಣ ಕೊಡಲಿಲ್ಲವೆಂದರೆ ಖಂಡಿತವಾಗಿ ಈವೊಂದು ಭಾಗಕ್ಕೆ ಮಲತಾಯಿ ಧೋರಣೆಯನ್ನು ತಾವು ಅನುಸರಿಸುತ್ತಿದ್ದೀರಿ ಎನ್ನತಕ್ಕ ಮಾತನ್ನು ನಾನು ಅನಿವಾರ್ಯವಾಗಿ ಹೇಳಬೇಕಾಗುತ್ತದೆ. ಬೇರೆ ವಿಧಿಯೇ ಇಲ್ಲದೆ ಈ ಮಾತನ್ನು ನಾನು ಪ್ರಸ್ತಾಪ ಮಾಡಬೇಕಾಗುತ್ತದೆ. ಇಚ್ಛೆಯಿದ್ದರೆ ಆ ಶಕ್ತಿಯಿದ್ದರೆ ಖಂಡಿತವಾಗಿಯೂ ನೀವು ಸಹಾಯವನ್ನುಮಾಡುತ್ತಿದ್ದಿರಿ. ಆ ಶಕ್ತಿ ನಿಮ್ಮಲ್ಲಿ ಇಲ್ಲವೆನ್ನತಕ್ಕ ಮಾತು ನಾನು ಸ್ಪಷ್ಟಪಡಿಸುತ್ತೇನೆ.

ಇನ್ನು ಯಾವರೀತಿಯಾಗಿ ಇವರು ಪ್ರತಿವರ್ಷ ಪ್ಲಾನ್‌ನಲ್ಲಿ ಶಾರ್ಟ್ ಫಾಲ್ ಮಾಡಿಕೊಂಡು ಬಂದಿದ್ದಾರೆಂಬುದನ್ನು ಹೇಳುತ್ತೇನೆ. ಏಕೆಂದರೆ ಇವರು ಮಾತೆತ್ತಿದರೆ ನಾವು ಎಲ್ಲ ಕೆಲಸ ಮಾಡಿದ್ದೇವೆಂದು ಹೇಳುತ್ತಾರೆ. ಆದು ಹೇಗೆ ಹೇಳುವ ಧೈರ್ಯ ಇವರಿಗೆ ಹೇಗೆ ಬರುತ್ತದೋ ಗೊತ್ತಿಲ್ಲ. ಆದರೆ ಇವರು ಹೇಳುವುದು ಮಾತ್ರ ಬಿಡುವುದಿಲ್ಲ. ಆದಕ್ಕೆ ನಮ್ಮಕಡೆ ಹೇಳುತ್ತಾರೆ ಮೊಂಡುಧೈರ್ಯ ಎಂದು. ಏನೂ ಮಾಡಲಿಲ್ಲವೆಂದರೂ ಎದೆ ಮುಂದೆ ಮಾಡಿ ಹೇಳುವುದು. ಈವೊಂದು ಪ್ರಯತ್ನ ನಮ್ಮ ಮುಖ್ಯಮಂತ್ರಿಗಳು ಮತ್ತು ಉಪ ಮುಖ್ಯಮಂತ್ರಿಗಳು ಯಾವಾಗಲೂ ಮಾಡುತ್ತಾರೆ. ತಮ್ಮ ಅವಗಾಹನೆಗೆ ತರುತ್ತೇನೆ. ಅವರು ಈಗಲಾದರೂ ತಿಳಿದುಕೊಂಡು ಸಹಾಯ ಮಾಡುತ್ತಾರೆಂದು. ಈಗಲಾದರೂ ಸ್ಪಷ್ಟವಾದ ಚಿತ್ರ ಈ ದೇಶದ ಮುಂದೆ ಬರುತ್ತದೆಂದು ನಾನು ತಿಳಿದುಕೊಂಡಿದ್ದೇನೆ. 1994-95ರಲ್ಲಿ ಇವರ ಅಪ್ರೂವ್ಡ್ ಔಟ್‌ಲೇ 3275ಕೋಟಿ ರೂ ಇತ್ತು. ಇವರ ರಿವೈಸ್ಡ್ ಔಟ್‌ಲೇ ಎಷ್ಟಾಯಿತು ಅಂದರೆ 2800ಕೋಟಿ ರೂಗಳು ಅಂದರೆ 448ಕೋಟಿ ರೂಪಾಯಿ ಖೋತಾ. 1995-96ರಲ್ಲಿ 3575 ಅಪ್ರೂವ್ಡ್ ಔಟಲೇ ಇದ್ದರೆ ಇವರು ಖರ್ಚು ಮಾಡಿದ ರಿವೈಸ್ಡ್ ಔಟಲೇ 3100ಕೋಟಿ ರೂಗಳು. ಖೋತಾ 475ಕೋಟಿ ರೂಗಳು ಆಮೇಲೆ 1996-97ರಲ್ಲಿ ಅಪ್ರೂವ್ಡ್ ಔಟಲೇ 4360 ಕೋಟಿ ರೂ.ಗಳು. ರಿವೈಸ್ಡ್ ಔಟಲೇಯಲ್ಲಿ 3700 ಕೋಟಿ ರೂಪಾಯಿ. ಖೋತ 607 ಕೋಟಿ ರೂ.ಗಳು. ಆದೇರೀತಿಯಾಗಿ ಈ ವರ್ಷ 1997-98ರಲ್ಲಿ 454 ಕೋಟಿ ರೂ, ಅಪ್ರೂವ್ಡ್ ಔಟಲೇ ಇದ್ದರೆ ರಿವೈಸ್ಡ್ ಔಡಲೇ ಆದರ ಪೂರ್ಣ ಫಿಗರ್ಸ್ ಇಲ್ಲ ಅದು ಸುಮಾರು 300 ರಿಂದ 400 ಕೋಟಿಗೆ ಬರುತ್ತದೆನ್ನುವ ಮಾತನ್ನು ಸ್ಪಷ್ಟಪಡಿಸುತ್ತೇನೆ. ಹೀಗೆ ಒಂದು ಪಂಚವಾರ್ಷಿಕ ಯೋಜನೆಯಲ್ಲಿ ನಾವು ಎಲ್ಲಾ ಲೆಕ್ಕ ಹಾಕಿದರೂ 1000 ಕೋಟಿ ರೂಪಾಯಿ ಖೋತ ಕಂಡುಬರುತ್ತದೆ.

ಅಧ್ಯಕ್ಷರು: ನಾಳೆ ಕಂಟಿನ್ಯೂ ಮಾಡೋಣ. ಇ.ಎಂ.ಎಸ್. ನಂಬೂದ್ರಿಪಾದ್‌ರವರು ತೀರಿಕೊಂಡರು ಎನ್ನುವ ವರ್ತಮಾನ ಬಂದಿದೆ. ಆವರ ಗೌರವಾರ್ಥ ತಾವೆಲ್ಲರೂ ಒಪ್ಪಿಕೊಂಡರೆ ಸಭೆಯನ್ನು ಮುಂದೂಡೋಣ. ತಾವುಗಳೆಲ್ಲಾ ಒಪ್ಪಿದ್ದೀರಿ ಎಂದು ಕಾಣುತ್ತದೆ. ಸಭೆಯು ನಾಳೆ ಬೆಳಿಗ್ಗೆ 10.00ಗಂಟೆಗೆ ಸಮಾವೇಶಗೊಳ್ಳುತ್ತದೆ.

(ಸದನವು 4 ಗಂಟೆ 47 ನಿಮಿಷಗಳಿಗೆ ಮುಂದೂಡಲ್ಪಟ್ಟು ಪುನಃ 20.3.98,ರ ಬೆಳಿಗ್ಗೆ 10.00 ಗಂಟೆಗೆ ಸೇರಲು ನಿಶ್ಚಯಿಸಿತು).